# संस्कृत-पद्य-मञ्जरी
## ಸಂಸ್ಕೃತ–ಪದ್ಯ–ಮಂಜರೀ
# Samskrita-Padya-Manjari
## Samskrita Text Book - B.com I Semester
### ಪ್ರಥಮ ಸೆಮಿಸ್ಟರ್ ಬಿ.ಕಾಂ. ಸಂಸ್ಕೃತ ಪಾಠ್ಯಪುಸ್ತಕ


**ಪ್ರಧಾನ ಸಂಪಾದಕರು**

**ಡಾ.ಕೆ.ಆರ್.ಕುಮುದವಲ್ಲಿ**

**ಸಂಪಾದಕರು**

**ಡಾ.ಎಸ್.ಎನ್.ಪ್ರಾಣೇಶ**

ಸಂಸ್ಕೃತ ವಿಭಾಗ ಮುಖ್ಯಸ್ಥರು
ಜೈನ್ ಕಾಲೇಜು

**ಡಾ.ಎನ್.ಎಸ್.ಸುರೇಶ್**

ಸಂಸ್ಕೃತ ವಿಭಾಗ ಮುಖ್ಯಸ್ಥರು
ಬಿ.ಎಮ್.ಎಸ್. ಮಹಿಳಾ ಕಾಲೇಜು



ಪ್ರಕಾಶಕರು, ಪ್ರಸಾರಾಂಗ
ಬೆಂಗಳೂರು ನಗರ ವಿಶ್ವವಿದ್ಯಾಲಯ
ಬೆಂಗಳೂರು ಸೆಂಟ್ರಲ್ ಕಾಲೇಜು ಆವರಣ
ಬೆಂಗಳೂರು – 560001

# संस्कृत-पद्य-मञ्जरी

## ಸಂಸ್ಕೃತ–ಪದ್ಯ–ಮಂಜರೀ

# Samskrita-Padya-Manjari

## Samskrita Text Book - B.com I Semester

### ಪ್ರಥಮ ಸೆಮಿಸ್ಟರ್ ಬಿ.ಕಾಂ. ಸಂಸ್ಕೃತ ಪಾಠ್ಯಪುಸ್ತಕ


**Chief Editor**

**Dr.K.R.Kumadavalli**

**Editors**

**Dr.S.N.Pranesha**

**Dr.N.S.Suresh**



Bengaluru City University

Central College Campus

Bengaluru – 560001

SAMSKRUTA-PADYA-MANJARI : A prescribed Text Book in Samskritam for First Semester B.com Degree Classes Edited with Introduction, Translation and notes in Kannada and English by Dr. S.N. Pranesha, H.O.D. of Samaskritam, Jain College, Vasavi Temple Road, Bengaluru-560 004 and Dr. N.S. Suresh, H.O.D. Department of Samskritam, BMS Women's College, Bugle Rock Road, Gandhi Bazaar, Bengaluru-560 004

Page :

Price :

Published by Prasaranga
Bengaluru City University
Central College Campus,
Bengaluru-560 001.

## ಕುಲಪತಿಗಳ ನುಡಿ

ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ 2024–2025ನೇ ಶೈಕ್ಷಣಿಕ ವರ್ಷದಿಂದ ರಾಜ್ಯ ಶಿಕ್ಷಣನೀತಿ (ಎಸ್.ಇ.ಪಿ.)ಯನ್ನು ಅಳವಡಿಸಿಕೊಳ್ಳಲು ನಿರ್ಧರಿಸಲಾಯಿತು. ಇದಕ್ಕೆ ಅನುಗುಣವಾಗಿ ಪದವಿ ಸ್ತರದ ಎಲ್ಲ ಪಾಠ್ಯಪುಸ್ತಕಗಳನ್ನೂ ಪರಿಷ್ಕರಿಸಲು ಸೂಚಿಸಲಾಗಿತ್ತು. ಈ ಸಂಬಂಧ ಸಂಸ್ಕೃತ ಅಧ್ಯಯನ ಮಂಡಲಿಯು ಎಲ್ಲ ಪದವಿ ತರಗತಿಗಳ ಸಂಸ್ಕೃತ ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕಗಳ ಪರಿಷ್ಕರಣೆಯನ್ನು ಮಾಡಿ ಹೊಸ ಪುಸ್ತಕಗಳನ್ನು ಸಿದ್ಧಪಡಿಸಿದೆ.

ಪ್ರಸ್ತುತ **'ಸಂಸ್ಕೃತ–ಪದ್ಯ–ಮಂಜರೀ'** ಎಂಬ ಈ ಪಾಠ್ಯ ಪುಸ್ತಕವನ್ನು ಪ್ರಥಮ ಸೆಮಿಸ್ಟರ್ ಬಿ.ಕಾಂ. ಸಂಸ್ಕೃತ ವಿದ್ಯಾರ್ಥಿಗಳಿಗಾಗಿ ಸಿದ್ಧಪಡಿಸಲಾಗಿದೆ. ಈ ಪಾಠ್ಯಪುಸ್ತಕದಲ್ಲಿ ರಾಮಾಯಣ, ಮಹಾಭಾರತ ಹಾಗೂ ಇತರ ಪ್ರಬುದ್ಧ ಸಾಹಿತ್ಯ ಗ್ರಂಥಗಳ ಕೆಲವು ಭಾಗಗಳನ್ನು ಆರಿಸಿಕೊಳ್ಳಲಾಗಿದೆ. ಇದು ಅತ್ಯಂತ ಸೂಕ್ತವಾದ ಚಿಂತನೆಯ ಹಿನ್ನೆಲೆಯಲ್ಲಿ ಮೂಡಿಬಂದಿದೆ. ನಮ್ಮ ಪ್ರಾಚೀನ ಸಾಹಿತ್ಯವು ಮಾನವನ ಬುದ್ಧಿಯನ್ನೂ, ಮನಸ್ಸನ್ನೂ ಪಕ್ವಗೊಳಿಸಿ ಉತ್ತಮ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಸಹಕಾರಿಯಾಗಿದೆ. ನಮ್ಮ ದೇಶದ ಪ್ರಾಚೀನ ಸಾಹಿತ್ಯಕಾರರು ಅತ್ಯಂತ ಪ್ರಾಮಾಣಿಕರೂ, ಉದಾತ್ತ ಜೀವನವನ್ನು ನಡೆಸಿದವರೂ ಹಾಗೂ ಸಮಗ್ರ ಮಾನವಜನಾಂಗಕ್ಕೆ ಶ್ರೇಷ್ಠವಾದ ಸಂದೇಶಗಳನ್ನು ನೀಡಿದವರೂ ಆಗಿದ್ದಾರೆ. ಈ ಮಹನೀಯರ ಸಾಹಿತ್ಯವನ್ನು ಅಧ್ಯಯನ ಮಾಡುವ ಮೂಲಕ ನಮ್ಮ ವಿದ್ಯಾರ್ಥಿಗಳು ಉತ್ತಮ ನೀತಿವಂತರೂ, ಪ್ರಜ್ಞಾವಂತ ಪ್ರಜೆಗಳೂ ಆಗಬೇಕೆಂಬುದು ನಮ್ಮ ಅನಿಸಿಕೆ.

ಅತ್ಯಂತ ಯೋಗ್ಯವಾದ ಸಾಹಿತ್ಯಾಂಶಗಳಿಂದ ಕೂಡಿದ ಈ ಪಾಠ್ಯಪುಸ್ತಕವನ್ನು ಸರಿಯಾದ ಸಮಯಕ್ಕೆ ಸಿದ್ಧಪಡಿಸಲು ಶ್ರಮಿಸಿರುವ ಸಂಸ್ಕೃತ ಅಧ್ಯಯನ ಮಂಡಲಿಯ ಅಧ್ಯಕ್ಷರಾದ ಶ್ರೀಮತಿ ಡಾ.ಕೆ.ಆರ್.ಕುಮುದವಲ್ಲಿಯವರಿಗೆ ವಂದನೆಗಳು. ಈ ಪುಸ್ತಕದ ಸಂಪಾದಕರಾದ ಎಸ್.ಎನ್. ಪ್ರಾಣೇಶ ಹಾಗೂ ಡಾ.ಎನ್.ಎಸ್. ಸುರೇಶ್ ಇವರಿಗೂ ಧನ್ಯವಾದಗಳು.

ಸಂಸ್ಕೃತ ಅಧ್ಯಾಪಕರೂ ಹಾಗೂ ವಿದ್ಯಾರ್ಥಿಗಳೂ ಈ ಕೃತಿಯ ಸದುಪಯೋಗವನ್ನು ಮಾಡಿಕೊಳ್ಳುವರೆಂದು ಆಶಿಸುತ್ತೇನೆ.

ಪ್ರೊ. ಲಿಂಗರಾಜ ಗಾಂಧಿ
ಕುಲಪತಿಗಳು
ಬೆಂಗಳೂರು ನಗರ ವಿಶ್ವವಿದ್ಯಾಲಯ
ಬೆಂಗಳೂರು–560 001

# ಪ್ರಧಾನಸಂಪಾದಕರ ನುಡಿ

**ಭಾರತಸ್ಯ ಪ್ರತಿಷ್ಠೇ ದ್ವೇ ಸಂಸ್ಕೃತಂ ಸಂಸ್ಕೃತಿಸ್ತಥಾ ।**
**ಯಾಭ್ಯಾಂ ಮಾನವ–ಮೌಲ್ಯಾನಾಂ ವರ್ಧನಂ ಶುದ್ಧ–ಜೀವನಮ್ ॥**

ಭಾರತದ ಎರಡು ವಿಶೇಷತೆಗಳೆಂದರೆ ಸಂಸ್ಕೃತಭಾಷೆ ಹಾಗೂ ಭಾರತೀಯ ಸಂಸ್ಕೃತಿ. ಇವುಗಳಿಂದ ಮಾನವೀಯ ಮೌಲ್ಯಗಳು ಹೆಚ್ಚುತ್ತವೆ ಮತ್ತು ಜೀವನವು ಶುದ್ಧವಾಗಿ ರೂಪುಗೊಳ್ಳುತ್ತದೆ. ಹಾಗಾಗಿ ಸಂಸ್ಕೃತ ಭಾಷೆಯ ಯಾವುದೇ ಸಾಹಿತ್ಯಕೃತಿಯೂ ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ ಎಂಬುದು ಸರ್ವವಿದಿತ. ಹೀಗೆ ಸಾವಿರಾರು ವರ್ಷಗಳ ಇತಿಹಾಸವಿರುವ ಈ ಭಾಷೆಯ ಕೃತಿಗಳ ಅಧ್ಯಯನ–ಅಧ್ಯಾಪನಗಳು ವಿಶ್ವದ ಹಲವಾರು ಭಾಗಗಳಲ್ಲಿ ಅನೂಚಾನವಾಗಿ ನಡೆದುಕೊಂಡು ಬರುತ್ತಿವೆ ಎಂಬುದು ಭಾರತೀಯರೆಲ್ಲರಿಗೂ ಹೆಮ್ಮೆಯ ಸಂಗತಿ.

2024–2025ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಂಸ್ಕೃತ ಅಧ್ಯಯನ ಮಂಡಳಿಯ ಅಧ್ಯಕ್ಷೆಯಾಗಿ ಕರ್ತವ್ಯ ನಿರ್ವಹಿಸುವ ಜವಾಬ್ದಾರಿಯು ನನಗೆ ದೊರಕಿದ್ದು ನನ್ನ ಸೌಭಾಗ್ಯವೆಂದೇ ಭಾವಿಸಿದ್ದೇನೆ. ರಾಜ್ಯದ ಶಿಕ್ಷಣ ನೀತಿಗೆ ಅನುಸಾರವಾಗಿ ಪಠ್ಯಪುಸ್ತಕಗಳ ಪರಿಷ್ಕರಣೆಯನ್ನು ಮಾಡಿ ಅವುಗಳ ಸಂಪಾದನೆಯ ದಾಯಿತ್ವವನ್ನು ಮಂಡಳಿಯ ಸದಸ್ಯರಿಗೆ ವಹಿಸಲಾಗಿತ್ತು. ಪದವಿ ಸ್ತರದ ವಿದ್ಯಾರ್ಥಿಗಳಿಗೆ ಸಂಸ್ಕೃತ ಸಾಹಿತ್ಯದ ಹೆಚ್ಚಿನ ಅರಿವನ್ನು ಉಂಟುಮಾಡುವ ಉದ್ದೇಶದಿಂದ ಸೂಕ್ತವಾದ ವಿವರಣೆಗಳೊಂದಿಗೆ ಪುಸ್ತಕಗಳನ್ನು ಸಂಪಾದಿಸಲು ಸೂಚಿಸಲಾಗಿತ್ತು. ಅದರಂತೆ ಪ್ರಥಮ ಸೆಮಿಸ್ಟರ್ ಬಿ.ಕಾಂ. ಸಂಸ್ಕೃತ ವಿದ್ಯಾರ್ಥಿಗಳಿಗಾಗಿ **'ಸಂಸ್ಕೃತ–ಪದ್ಯ–ಮಂಜರೀ'** ಎಂಬ ಈ ಪಾಠ್ಯಪುಸ್ತಕವನ್ನು ಜೈನ್ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾದ ಡಾ.ಎಸ್.ಎನ್.ಪ್ರಾಣೇಶ ಹಾಗೂ ಬಿ.ಎಮ್.ಎಸ್. ಮಹಿಳಾ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾದ ಡಾ.ಎನ್.ಎಸ್. ಸುರೇಶ್ ಇವರು ಸಂಪಾದಿಸಿದ್ದಾರೆ. ಇವರಿಬ್ಬರಿಗೂ ಹೃತ್ಪೂರ್ವಕವಾದ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ. ಈ ಪದ್ಯಮಂಜರಿಯಲ್ಲಿ ರಾಮಾಯಣ, ಮಹಾಭಾರತ, ನೀತಿಶತಕ ಮತ್ತು ಗಜೇಂದ್ರ ಮೋಕ್ಷದ ಭಾಗಗಳನ್ನು ಆರಿಸಿಕೊಳ್ಳಲಾಗಿದೆ. ಈ ಕಾವ್ಯಭಾಗಗಳು ಮನುಷ್ಯನ ಜೀವನದ ಸಾರವನ್ನು ಬೋಧಿಸುವ ಮೂಲಕ ಎಲ್ಲ ವಿದ್ಯಾರ್ಥಿಗಳಿಗೂ ಮಾರ್ಗದರ್ಶನವನ್ನು ಮಾಡಲಿ ಎಂದು ಆಶಿಸುತ್ತೇನೆ.

ಸಂಸ್ಕೃತ ಅಧ್ಯಯನ ಮಂಡಳಿಯ ಶೈಕ್ಷಣಿಕವಾದ ಎಲ್ಲ ನಿರ್ಧಾರಗಳನ್ನೂ ಬೆಂಬಲಿಸಿ ಪ್ರೋತ್ಸಾಹಿಸುತ್ತಿರುವ ಬೆಂಗಳೂರು ನಗರ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಪ್ರೊ. ಲಿಂಗರಾಜ ಗಾಂಧಿಯವರಿಗೆ ಕೃತಜ್ಞತಾಪೂರ್ವಕವಾಗಿ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಇತಿ,

ಡಾ.ಕೆ.ಆರ್.ಕುಮುದವಲ್ಲಿ
ಅಧ್ಯಕ್ಷರು, ಸಂಸ್ಕೃತ ಅಧ್ಯಯನ ಮಂಡಳಿ
ಬೆಂಗಳೂರು ನಗರ ವಿಶ್ವವಿದ್ಯಾಲಯ

## ಸಂಪಾದಕರ ನುಡಿ

ಶ್ರೀರಾಮಾಯಣ ಹಾಗೂ ಮಹಾಭಾರತ ಗ್ರಂಥಗಳು ನಮ್ಮ ದೇಶದ ಇತಿಹಾಸವನ್ನು ಸ್ಪಷ್ಟವಾಗಿ ನಿರೂಪಿಸುತ್ತಿವೆ. ನಮ್ಮ ಜೀವನಪದ್ಧತಿಯಲ್ಲಿರುವ ಮೌಲ್ಯಗಳನ್ನು ವಿವರಿಸುತ್ತಿವೆ. 'ನಾವು ಇತಿಹಾಸದಿಂದ ಏನನ್ನೂ ಕಲಿಯಲಾಗದು' ಎಂಬುದು ಪಾಶ್ಚಿಮಾತ್ಯರ ನಿಲುವು. ಆದರೆ ನಮ್ಮ ಜೀವನವೇ ಇತಿಹಾಸವನ್ನು ಅನುಸರಿಸಬೇಕು ಎಂಬುದು ನಮ್ಮ ಹಿರಿಯರ ಸ್ಪಷ್ಟ ಉಪದೇಶ. ಆದುದರಿಂದಲೇ ಇಂದಿಗೂ ನಮ್ಮ ವ್ಯವಹಾರಗಳಲ್ಲಿ, ಮಾತು-ಕಥೆಗಳಲ್ಲಿ ರಾಮಾಯಣ-ಮಹಾಭಾರತಗಳ ಉಲ್ಲೇಖಗಳನ್ನು ಕಾಣುತ್ತೇವೆ. ಇವುಗಳ ನಿರಂತರ ಅಧ್ಯಯನ, ಅಧ್ಯಾಪನ, ಪಾರಾಯಣ ಎಲ್ಲವೂ ನಮ್ಮ ಇಹಲೋಕದ ಅಭಿವೃದ್ಧಿಗೂ ಹಾಗೂ ಪರಲೋಕದ ಶಾಶ್ವತ ಸುಖಕ್ಕೂ ಕಾರಣವಾಗಿವೆ ಎಂಬುದಾಗಿ ನಮಗೆ ಪರಿಪೂರ್ಣವಾದ ವಿಶ್ವಾಸವಿದೆ. ನಮ್ಮ ದೇಶದ ಯಾವ ಸ್ತರದ ವಿದ್ಯಾರ್ಥಿಯೇ ಆದರೂ ರಾಮಾಯಣದ ಮಾರ್ಗದರ್ಶನವನ್ನು ಪಡೆದರೆ ಅವನ ಜೀವನವು ಉದಾತ್ತವಾಗುವುದು ನಿಶ್ಚಿತ.  ಈ ಕಾರಣದಿಂದ ಪ್ರಥಮ ಸೆಮಿಸ್ಟರ್ ಬಿ.ಕಾಂ. ಪದವಿ ತರಗತಿಯ ವಿದ್ಯಾರ್ಥಿಗಳಿಗೆ ರಾಮಾಯಣದ ಬಾಲಕಾಂಡದ ಕಥೆಯ ಭಾಗವನ್ನು ಪಾಠ್ಯವನ್ನಾಗಿ ನಿರ್ಧರಿಸಲಾಗಿದೆ. ಶ್ರೀವಾಲ್ಮೀಕಿ ಮುನಿಗಳು ರಾಮಾಯಣವನ್ನು ಬರೆದರು. ಅವರನ್ನೇ ಅನುಸರಿಸಿ ಬಹಳಷ್ಟು ಮಂದಿ ಕವಿಗಳು ಅದೇ ರಾಮಾಯಣವನ್ನೇ ತಮ್ಮ ಶೈಲಿಯಲ್ಲಿ ಬಹಳ ಸ್ವಾರಸ್ಯಕರವಾಗಿ ನಿರೂಪಿಸಿದ್ದಾರೆ. ಅದರಂತೆಯೇ ಸರಳವಾದ ಸಂಸ್ಕೃತ-ಭಾಷೆಯಲ್ಲಿ 'ಶ್ರೀರಾಮೋದಂತ' ಎಂಬ ಕಾವ್ಯವು ಬಹಳ ಪ್ರಸಿದ್ಧವಾಗಿದೆ. ಆದರೆ ಇದರ ಕವಿ ಯಾರು? ಎಂಬುದು ಮಾತ್ರ ಸ್ಪಷ್ಟವಾಗಿ ತಿಳಿದುಬಂದಿಲ್ಲ. ಆದರೂ ಸಂಸ್ಕೃತ-ವಿದ್ಯಾರ್ಥಿಗಳಿಗೆ ಈ ಗ್ರಂಥವು ಅತ್ಯಂತ ಉತ್ತಮವಾದ ಮಾರ್ಗದರ್ಶಕವಾಗಿದೆ. ಆದ ಕಾರಣ ಇದನ್ನು ಪ್ರಥಮ ಪಾಠವನ್ನಾಗಿ ಸ್ವೀಕರಿಸಲಾಗಿದೆ.

ಇದರೊಂದಿಗೆ ಆಧುನಿಕ ಸಂಸ್ಕೃತ ಕವಿಗಳಾದ ಶ್ರೀಶ್ರೀರಂಗಪ್ರಿಯ ಮಹಾಸ್ವಾಮಿಗಳ 'ಗಜೇಂದ್ರ ಮೋಕ್ಷ' ಕಾವ್ಯದ ಸಂಗೃಹೀತ ಭಾಗವನ್ನು ದ್ವಿತೀಯ ಪಾಠವನ್ನಾಗಿ ಆರಿಸಿಕೊಳ್ಳಲಾಗಿದೆ. ತೃತೀಯ ಪಾಠದಲ್ಲಿ ಭರ್ತೃಹರಿ ಮಹಾಕವಿಯ ನೀತಿಶತಕದ ಹತ್ತು ಶ್ಲೋಕಗಳನ್ನು ಆಯ್ದುಕೊಳ್ಳಲಾಗಿದೆ. ಚತುರ್ಥ ಪಾಠದ ಭಾಗವಾಗಿ ಶ್ರೀಭಗವದ್ಗೀತೆಯ ಹದಿನೇಳನೇ ಅಧ್ಯಾಯವನ್ನು ತೆಗೆದುಕೊಂಡಿದ್ದೇವೆ. ಈ ಎಲ್ಲ ಪಾಠಗಳೂ ಜೀವನದ ಮೌಲ್ಯಗಳನ್ನು ಬೋಧಿಸುವ ಮೂಲಕ ವಿದ್ಯಾರ್ಥಿಗಳನ್ನು ನಮ್ಮ ದೇಶದ ಸಭ್ಯ ಹಾಗೂ ಪ್ರಜ್ಞಾವಂತ ಪ್ರಜೆಗಳನ್ನಾಗಿ ರೂಪಿಸುತ್ತವೆ.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿಗಳು, ಕುಲಸಚಿವರು ಮೊದಲಾದವರ ಆದೇಶದಂತೆ ಸಂಸ್ಕೃತ ಅಧ್ಯಯನ ಮಂಡಲಿಯ ರಚನೆಯಾಗಿದೆ.  ಶ್ರೀಮತಿ ಡಾ.ಕೆ.ಆರ್.ಕುಮುದವಲ್ಲಿಯವರು ಇದರ ಅಧ್ಯಕ್ಷರಾಗಿ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಅಧ್ಯಕ್ಷತೆಯಲ್ಲಿ ಪಾಠ್ಯ ಪುಸ್ತಕ ರಚನೆಯ ವಿಷಯದಲ್ಲಿ ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ ಅನೇಕ ಸಂಸ್ಕೃತ ವಿದ್ವಾಂಸರು ಚರ್ಚಿಸಿ, ಇಂದಿನ ವಿದ್ಯಾರ್ಥಿಗಳಿಗೆ ಅತ್ಯಂತ ಅಗತ್ಯವಾದ ಜೀವನ ಮೌಲ್ಯಗಳನ್ನು ಬೋಧಿಸುವುದಕ್ಕಾಗಿ ಸಂಸ್ಕೃತ ಸಾಹಿತ್ಯದ ಉತ್ಕೃಷ್ಟವಾದ ಭಾಗಗಳನ್ನು ಸ್ವೀಕರಿಸಿ ಪಾಠ್ಯಪುಸ್ತಕವನ್ನು ರಚಿಸಬೇಕೆಂದು ನಿಶ್ಚಯಿಸಲಾಯಿತು. ಇದರಿಂದ ಸಂಸ್ಕೃತ ವಿದ್ಯಾರ್ಥಿಗಳು ಸರ್ವತೋಮುಖವಾದ ವಿಕಾಸವನ್ನು ಹೊಂದಲು ಸಾಧ್ಯವಾಗುತ್ತದೆ ಎಂಬುದು ನಮ್ಮ ವಿಶ್ವಾಸ. ಈ ಪುಸ್ತಕ-ರಚನೆಗೆ ನಮಗೆ ಆದೇಶಿಸಿ, ಸಹಕಾರ ನೀಡಿದ ಮಂಡಲಿಯ ಅಧ್ಯಕ್ಷರಿಗೂ ಹಾಗೂ ಇತರ ಸದಸ್ಯರಿಗೂ ತುಂಬು ಹೃದಯದ ಧನ್ಯವಾದಗಳು.

ಸುಜನವಿಧೇಯರು

ಡಾ.ಎನ್.ಎಸ್.ಸುರೇಶ್

ಡಾ.ಎಸ್.ಎನ್.ಪ್ರಾಣೇಶ

## Members of Samskrita Adhyayana Mandali (B.O.S)

1. Dr. K.R.Kumudavalli, Chairperson Associate Professor, Vijaya College, Bengaluru-560004.
2. Smt. G.S.Yadugiri, Member Associate Professor, SJRC College, Bengaluru
3. Dr. K.R.Janardhanachar Member Associate Professor in Sanskrit, Vijaya College, Bengaluru-560 004.
4. Dr. N.S.Suresh, Member Associate Professor in Sanskrit, BMS College for Women (Autonomous) Bugle Park Road, Basavanagudi, Bengaluru-560 004.
5. Dr. S.N. Pranesh, Member HOD & Associate Professor in Sanskrit, Jain College, Vasavi Temple Road, Basavanagudi, Bengaluru-560 004.
6. Vidwan N.R.Subramanya, Member HOD & Associate Professor in Sanskrit, Sindhi College, Kempapura, Hebbala, Bengaluru-560 024.
7. Vidwan H.N.Suresh, Member Associate Professor in Sanskrit, Vijaya College, Bengaluru-560 004.
8. Smt. Rajeshwari K., Member HOD & Assistant Professor in Sanskrit, MES College of Arts, Commerce & Science, Prof M.P.L. Sastryís Road, Malleshwaram, 15th Cross, Bengaluru-560 003.
9. Vidushi Malathi H., Member HOD & Assistant Professor in Sanskrit, RNS First Grade College, Channasandra, Bengaluru-560 098.
10. Vidwan S.Ramprasad, Member Assistant Professor in Sanskrit, Vijaya College, Jayanagar 4th Block, Bengaluru-560 011.

# विषयानुक्रमणिका

## भागः – 1

1. रामोदन्ते बालकाण्ड– सङ्ग्रहः – 09

2. गजेन्द्र–मोक्ष–सङ्ग्रहः – 22

3. नीतिशतके सुजन–पद्धतिः – 63

4. भगवद्गीतायाः सप्तदशाध्याय–सङ्ग्रहः – 72

## भागः – 2

1. संस्कृत–पद्यकाव्य–परिचयः – 79

Scheme of Examination – 94

# प्रथमो भागः Unit - 1
# श्रीरामोदन्तम्
## ಪೀಠಿಕೆ

ವಿಶ್ವ ಸಾಹಿತ್ಯದ ಕೆಲವೇ ಶ್ರೇಷ್ಠ ಕೃತಿಗಳಲ್ಲಿ ರಾಮಾಯಣವು ಅಗ್ರಮಾನ್ಯವಾಗಿದೆ. ಭರತಖಂಡದ ಜನಜೀವನವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಇದರ ಅಧ್ಯಯನ ಅತ್ಯಗತ್ಯ. "ರಾಮಸ್ಯ ಅಯನಮಧಿಕೃತ್ಯ ಕೃತೋ ಗ್ರಂಥಃ" ಎಂದು ಇದರ ಅರ್ಥ. ಅಂದರೆ ಮಹಾವಿಷ್ಣುವಿನ ಅವತಾರಗಳಲ್ಲಿ ಏಳನೆಯದಾದ ದಶರಥನ ಜ್ಯೇಷ್ಠ ಪುತ್ರನಾದ ಶ್ರೀ ರಾಮಚಂದ್ರನ ಚರಿತೆ ಅಥವಾ ಅವನ ಜೀವನ ಮಾರ್ಗವನ್ನು ಅವಲಂಬಿಸಿ ವಾಲ್ಮೀಕಿ ಮುನಿಗಳಿಂದ ಬರೆಯಲ್ಪಟ್ಟ ಆದಿಕಾವ್ಯವೇ ರಾಮಾಯಣ. ಈ ಗ್ರಂಥವು ಇಂದು ಜಗತ್ತಿನಾದ್ಯಂತ ಖ್ಯಾತಿ ಪಡೆದಿದೆ. ಇದರಲ್ಲಿ ಪ್ರತಿಪಾದಿತವಾಗಿರುವ ನೈತಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳೇ ಅದಕ್ಕೆ ಕಾರಣ. ಅತಿ ಪ್ರಾಚೀನ ಕಾಲದಿಂದ ಹಿಡಿದು ಇಂದಿನವರೆಗೂ ಜನಜೀವನ ಮತ್ತು ಸಾಹಿತ್ಯಗಳ ಮೇಲೆ ಅದ್ಭುತವಾದ ಪ್ರಭಾವ ಬೀರುತ್ತಿರುವ ಇಂತಹ ಕೃತಿ ಇನ್ನೊಂದಿಲ್ಲ.

**ಕಾಲ :**

ವಾಲ್ಮೀಕಿಯ ಕುರಿತಾಗಿ ಅಥವಾ ರಾಮಾಯಣದ ರಚನೆಯ ಕಾಲದ ಕುರಿತಾಗಲೀ ಇದಮಿತ್ಥಂ ಎಂದು ನಿಶ್ಚಿತವಾಗಿ ಅಭಿಪ್ರಾಯಕ್ಕೆ ಬರಲು ಯಾವುದೇ ಸ್ಪಷ್ಟ ಆಧಾರಗಳು ಇಲ್ಲ. ಪ್ರಾಚೀನ ನಂಬಿಕೆಯ ಪ್ರಕಾರ ತ್ರೇತಾಯುಗದಲ್ಲಿ ರಾಮಾಯಣದ ರಚನೆಯಾಯಿತು. ಮತ್ತು ವಾಲ್ಮೀಕಿಯೂ ರಾಮಾಯಣದ ಪ್ರಮುಖ ಪಾತ್ರವಾಗಿರುವುದರಿಂದ, ರಾಮನ ಕಾಲ, ವಾಲ್ಮೀಕಿಯ ಕಾಲ ಮತ್ತು ರಾಮಾಯಣದ ರಚನೆ ಇವೆಲ್ಲವೂ ಸಮಕಾಲದಲ್ಲಾಯಿತು ಎನ್ನಬಹುದು. ವೇದಾರ್ಥ ಪ್ರತಿಪಾದನೆಯೇ ಗ್ರಂಥದ ಮುಖ್ಯ ಉದ್ದೇಶವಾಗಿರುವುದರಿಂದ ರಾಮಾಯಣ ರಚನೆ ವೇದಕಾಲೋತ್ತರ ಎನ್ನುವುದರಲ್ಲಿ ಸಂಶಯವಿಲ್ಲ. ಮಹಾಭಾರತದಲ್ಲಿ ರಾಮೋಪ್ಯಾಖ್ಯಾನವಿರುವುದರಿಂದ ರಾಮಾಯಣದ ರಚನೆ ಮಹಾಭಾರತಕ್ಕಿಂತ ಮೊದಲೇ ಆಗಿತ್ತು. ರಾಮನ ಜನನ ಕಾಲದ ಗ್ರಹಸ್ಥಿತಿ ಗ್ರಂಥದಲ್ಲಿ ವಿವರಿಸಲ್ಪಟ್ಟಿದೆ. ಖಗೋಳ ಶಾಸ್ತ್ರ ಅಥವಾ ಜ್ಯೋತಿಷಶಾಸ್ತ್ರದ ಪ್ರಕಾರ ಅಂತಹ ಗ್ರಹಸ್ಥಿತಿ ಸುಮಾರು ಕ್ರಿ.ಪೂ. 5000 ಸಾವಿರಕ್ಕಿಂತ ಮುಂಚಿತವಾಗಿ ಇತ್ತು. ಈ ಆಧಾರಗಳ ಮೇಲೆ ರಾಮಾಯಣದ ರಚನೆ ಕ್ರಿ.ಪೂ. 6000 ರಿಂದ ಕ್ರಿ.ಪೂ. 4000 ವರ್ಷಗಳ ಮಧ್ಯ ಕಾಲದಲ್ಲಿ ನಡೆದಿರಬಹುದೆಂದು ಊಹಿಸಬಹುದು.

**ವಾಲ್ಮೀಕಿ :**

ಲವಕುಶರನ್ನು ಪೋಷಿಸಿ, ವಿದ್ಯಾಭ್ಯಾಸ ನೀಡಿ, ರಾಮಾಯಣವನ್ನು ಬೋಧಿಸುವ ವಾಲ್ಮೀಕಿ ಮಹರ್ಷಿಗಳು ರಾಮಾಯಣದ ಪ್ರಮುಖ ಪಾತ್ರ ಮತ್ತು ಕರ್ತೃಗಳೂ ಆಗಿದ್ದಾರೆ. ತಮಸಾ ನದೀ ತೀರದ ಸಮಿತ್ತುಗಳ ಸಂಗ್ರಹಣೆಗೆ ಶಿಷ್ಯರೊಂದಿಗೆ ಹೋದಾಗ ಕಂಡ ಕ್ರೌಂಚ ಪಕ್ಷಿಯ ಶೋಕವು ಶ್ಲೋಕರೂಪದಿಂದ ಹೊರಬಂದಿತು. ಇದೇ ಮೊದಲ ಛಂದೋಬದ್ಧ ರಚನೆ. ನಾರದರ ಮೂಲಕ ಬ್ರಹ್ಮನ ಆಜ್ಞೆಯಂತೆ ರಾಮಾಯಣದ ರಚನೆಗೆ ಕಾರಣವಾಯಿತು. ಆದುದರಿಂದಲೇ ವಾಲ್ಮೀಕಿಯನ್ನು ಆದಿಕವಿ ಎಂದೂ ಮತ್ತು ರಾಮಾಯಣವನ್ನು ಆದಿಕಾವ್ಯವೆಂದೂ ಕರೆಯುತ್ತಾರೆ. ಸಮಸ್ತ ಭಾರತೀಯ ಸಾಹಿತ್ಯ ಪರಂಪರೆ ವಾಲ್ಮೀಕಿಗೆ ಆಭಾರಿಯಾಗಿದೆ ಎನ್ನುವುದಕ್ಕೆ ಕಾಳಿದಾಸನದೆಂದು ಹೇಳಲಾಗುವ ಈ ಶ್ಲೋಕವೇ ಸಾಕ್ಷಿ.

कूजन्तं राम रामेति मधुरं मधुराक्षरम् ।
आरुह्य कविताशाखां वन्दे वाल्मीकिकोकिलम् ॥

**ರಾಮಾಯಣ :**

ರಾಮನ ಇತಿಹಾಸವನ್ನು ವರ್ಣಿಸುವ ಈ ಗ್ರಂಥದಲ್ಲಿ 7 ಕಾಂಡಗಳು ಹಾಗೂ ಒಟ್ಟು 24000 ಶ್ಲೋಕಗಳಿವೆ. ಅಯೋಧ್ಯೆಯ ಸೂರ್ಯವಂಶದ ರಾಜಪುತ್ರ ರಾಮ, ಆತನ ಮಡದಿ ಸೀತೆ ಮತ್ತು ಆ ಸೀತೆಯನ್ನು ಅಪಹರಣ ಮಾಡಿದ ರಾವಣನ ಸಂಹಾರ ಇವು ರಾಮಾಯಣದ ಮುಖ್ಯ ಕಥಾವಸ್ತು.

1. **ಬಾಲಕಾಂಡ:** ರಾಮನ ಜನನ, ಬಾಲ್ಯ, ವಿಶ್ವಾಮಿತ್ರರೊಡನೆ ಕಾಡಿಗೆ ಹೋಗಿ ರಾಕ್ಷಸ ಸಂಹಾರ, ವಿವಿಧ ಅಸ್ತ್ರಗಳ ಪ್ರಾಪ್ತಿ, ಸೀತಾ ಸ್ವಯಂವರ ಮುಂತಾದ ಘಟನೆಗಳು ಈ ಕಾಂಡದಲ್ಲಿವೆ.

2. **ಅಯೋಧ್ಯಾ ಕಾಂಡ :** ಕೈಕೇಯಿ ಎರಡು ವರಗಳನ್ನು ಕೇಳುವುದು, ರಾಮ ಸೀತಾ ಲಕ್ಷ್ಮಣರ ವನವಾಸ ಮತ್ತೆ ಪುತ್ರಶೋಕದಿಂದ ದಶರಥನ ಮರಣ ಇಲ್ಲಿಯ ಕಥಾವಸ್ತು.

3. **ಅರಣ್ಯ ಕಾಂಡ :** ರಾಮ, ಸೀತೆ ಮತ್ತು ಲಕ್ಷ್ಮಣರ ವನವಾಸ ಜೀವನ ಖರದೂಷಣಾದಿ ರಾಕ್ಷಸರ ಸಂಹಾರ, ಶೂರ್ಪಣಖಾ ಪ್ರಸಂಗ ಮತ್ತು ಸೀತಾಪಹರಣ–ಈ ಕಾಂಡದ ಪ್ರಮುಖ ವಿಷಯಗಳು.

4. **ಕಿಷ್ಕಿಂಧಾ ಕಾಂಡ :** ಸೀತೆಯನ್ನು ಅರಸುತ್ತಾ ರಾಮ ಕಿಷ್ಕಿಂಧೆಗೆ ಬರುವುದು, ವಾನರ ಸಾಮ್ರಾಜ್ಯದಲ್ಲಿ ಸುಗ್ರೀವ–ಹನುಮಂತ ಮುಂತಾದ ಕಪಿವೀರರ ಸಖ್ಯ, ವಾನರ ಸೈನ್ಯದಿಂದ ಸೀತಾನ್ವೇಷಣೆ ಈ ಕಾಂಡದ ಪ್ರಮುಖ ವಿಷಯಗಳು.

5. **ಸುಂದರ ಕಾಂಡ :** ಹನುಮಂತನ ಇನ್ನೊಂದು ಹೆಸರು ಸುಂದರ, ಆದ್ದರಿಂದಲೇ ಈ ಕಾಂಡಕ್ಕೆ ಸುಂದರಕಾಂಡ ಎಂದು ಹೆಸರು. ಹನುಮಂತ ಸಮುದ್ರೋಲ್ಲಂಘನ ಮಾಡಿ; ಅಶೋಕ ವನದಲ್ಲಿ ಸೀತೆಯನ್ನು ಕಂಡು ಆಕೆಗೆ ರಾಮನ ಉಂಗುರವನ್ನು ನೀಡಿ, ಆಕೆಯಿಂದ ಪಡೆದ ಚೂಡಾಮಣಿಯನ್ನು ತಂದು ರಾಮನಿಗೆ ಸಮರ್ಪಿಸಿ ವಿಷಯವನ್ನು ತಿಳಿಸುವುದು ಇದರ ಪ್ರಮುಖ ವಿಷಯ.

6. **ಯುದ್ಧ ಕಾಂಡ :** ಈ ಭಾಗದಲ್ಲಿ ಸೇತುಬಂಧನ, ರಾಮ–ರಾವಣರ ಯುದ್ಧ, ರಾವಣನ ಸಂಹಾರ, ಪರಿವಾರ ಸಮೇತ ರಾಮ ಅಯೋಧ್ಯೆಗೆ ಪುನರಾಗಮನ ಮತ್ತು ಶ್ರೀರಾಮ ಪಟ್ಟಾಭಿಷೇಕ ಮೊದಲಾದ ವರ್ಣನೆಗಳು ಇಲ್ಲಿವೆ.

7. **ಉತ್ತರ ಕಾಂಡ :** ವನವಾಸದ ನಂತರ ರಾಮ ಸೀತೆ ಅಯೋಧ್ಯೆಯಲ್ಲಿ ಕಳೆದ ದಿನಗಳು, ಅಗಸನ ಮಾತಿನ ಕಾರಣ ರಾಮನಿಂದ ಸೀತಾ ಪರಿತ್ಯಾಗ, ಲವಕುಶ ಜನನ, ರಾಮಾವತಾರದ ಸಮಾಪ್ತಿ ಈ ಭಾಗದಲ್ಲಿ ಪ್ರಮುಖ ವಿಷಯಗಳು.

ಮೊದಲ ಮತ್ತು ಕೊನೆಯ ಕಾಂಡಗಳ ಕರ್ತೃ ವಾಲ್ಮೀಕಿ ಎನ್ನುವ ವಿಚಾರದಲ್ಲಿ ಕೆಲವು ಸಂದೇಹಗಳಿದ್ದರೂ ಶೈಲಿಯಲ್ಲಿ ವ್ಯತ್ಯಾಸ, ಕಥೆಯಲ್ಲಿ ವಿರೋಧಾಭಾಸಗಳಿದ್ದರೂ ಈ ಎರಡೂ ಕಾಂಡಗಳು ರಾಮಾಯಣದ ಅವಿಭಾಜ್ಯ ಅಂಗಗಳು ಎನ್ನುವುದು ಕೆಲವು ತಜ್ಞರ ಅಭಿಪ್ರಾಯವಾಗಿದೆ.

**'परं कवीनाम् आधारम्'** ಎಂದು ಹೇಳುವಂತೆ ಈ ಕೃತಿಯ ಪ್ರಭಾವ ಭಾರತೀಯ ಸಾಹಿತ್ಯ ಪರಂಪರೆಯ ಮೇಲೆ ಅಗಾಧವಾಗಿದೆ. ಭಾಸ, ಕಾಳಿದಾಸ, ಭವಭೂತಿ, ಕನ್ನಡದ ಆದಿಕವಿ ಪಂಪ, ಕುವೆಂಪು, ಮಾಸ್ತಿ ವೆಂಕಟೇಶ ಐಯ್ಯಂಗಾರ್, ರವೀಂದ್ರನಾಥ ಟಾಗೂರ್ ಮುಂತಾದ ಶ್ರೇಷ್ಠ ಕವಿಗಳು, ಶಂಕರ, ಮಧ್ವ, ರಾಮಾನುಜರೇ ಮೊದಲಾದ ಆಚಾರ್ಯರೂ, ಮಹಾತ್ಮಾಗಾಂಧಿಯೇ ಮೊದಲಾದ ಸಾಮಾಜಿಕ ನಾಯಕರೂ ಸಹಾ ರಾಮಾಯಣದಿಂದ ಪ್ರಭಾವಿತರೇ ಎನ್ನುವುದು ಮತ್ತು ಪ್ರಪಂಚದ ಪ್ರಮುಖ ಭಾಷೆಗಳಿಗೆ ಈ ಕೃತಿ ಅನುವಾದವಾಗಿರುವುದು, ಭಾರತೀಯೇತರ ಭಾಷೆಗಳಲ್ಲೂ ರಾಮಾಯಣಾಧಾರಿತ ಕೃತಿಗಳ ರಚನೆಯಾಗಿರುವುದು ರಾಮಾಯಣದ ಅನನ್ಯತೆಗೆ ಸಾಕ್ಷಿಯಾಗಿದೆ.

# Ramayana

The Ramayana is widely regarded as the best among the classic literary works in the world. It is revered as the Adi-kavya, or the first poetry which is a testament to its age and importance. By delving into the Ramayana, readers gain a profound perspective on the life and cultural ethos of the people of Bharata. The word “Ramayana” translates to “the path walked by Rama”offering an account of the life of Sri Rama, an incarnation of Lord Vishnu. The Ramayana offers a profound insight into the culture, values, and way of life of the people of Bharata, making it a valuable resource for understanding the moral, political, social, ethical, and family values.

## Age of Ramayana:

Owing to the lack of historical evidence, the age of Ramayana and Valmiki, the author of Ramayana, cannot be ascertained unambiguously. It is believed that the Ramayana was written in the Treta yuga. From the study of the Ramayana, one can understand that the composition of Ramayana, Rama and Valmiki were contemporary. Scholars believe that Ramayana belongs to the post-Vedic age as the very purpose of Ramayana is to establish the Vedic values. As one can see Ramopaakhyaana, a brief account of Ramayana in the Mahabharata, it can be concluded Ramayana is older than the Mahabharata. The planetary positions at the time of birth of Rama as given in the Ramayana, astronomically correspond to 5000 BC or earlier. So, one can safely guess, that the time of Ramayana was between 6000 BC and 4000 BC.

## Valmiki:

The story of how sage Valmiki composed the first ‘Shloka’ in history is a fascinating and significant aspect of the Ramayana. The incident, where Valmiki witnessed the poignant scene of the krouncha bird’s death and its partner’s grief, deeply touched his heart and soul. The verse that spontaneously emerged from his grief was not only poetically beautiful but also structurally perfect in meter, known as ‘Shloka.’

This incident led to Valmiki being hailed as ‘Adi-Kavi,’ the first poet, and his creation Ramayana as ‘Adi-Kavya,’ the first poetry. This moment marked the genesis of poetic expression and literary artistry in ancient India, with Valmiki setting the stage for a rich tradition of storytelling and verse composition.

Moreover, sage Valmiki’s role in the upbringing of Lava and Kusha, the twin sons of Lord Rama, further underscores his pivotal position in the Ramayana. His guidance and mentorship of the young princes not only shaped their characters but also reinforced the enduring legacy of Valmiki as a revered sage, poet, and teacher.

The Ramayana, with its seven cantos or 'Kaandas', stands as a monumental literary work consisting of twenty-four thousand verses or 'Shlokas'. This epic narrative is centred around the life and adventures of Prince Rama of Ayodhya, who undergoes a period of exile and undertakes a quest to rescue his beloved wife Sita from the clutches of the demon king Ravana. The Ramayana delves into profound themes such as dharma, righteousness, and the eternal struggle between good and evil, offering valuable insights into human morality and spirituality.

As a foundational text in Indian culture, the Ramayana holds immense cultural and religious significance, revered for its moral teachings and timeless wisdom. Over the centuries, the epic has been retold, reinterpreted, and adapted in various forms of literature, art, and performance, reflecting its enduring influence and appeal across diverse media and audiences. The universal themes and characters depicted in the Ramayana continue to resonate with people worldwide, making it a cherished and celebrated masterpiece of world literature.

**Baala Kanda** is the first chapter of the Ramayana. It primarily focuses on the early life of Lord Rama, his birth, childhood, and his marriage to Sita. The Bala Kanda also includes the story of Rama's father, King Dasharatha, and the events leading up to Rama's exile from Ayodhya. It is considered a significant part of the Ramayana as it sets the stage for the rest of the epic.

**Ayodhya Kanda,** the second chapter, primarily focuses on the events that occur in the city of Ayodhya, including the exile of Lord Rama, the grief of his father King Dasharatha, and the reactions of Rama's brothers and his wife Sita. It also includes the plotting of Kaikeyi, Rama's stepmother, which leads to Rama's exile. This book sets the stage for Rama's journey to the forest and Sita's subsequent abduction by the demon king Ravana.

**Aranya Kanda** the third chapter, primarily focuses on the period of Lord Rama's exile in the forest, along with his wife Sita and his brother Lakshmana. It narrates their encounters with various rishis - ascetics, demons during their time in the forest. One of the key events in this book is the abduction of Sita by the demon king Ravana, which sets the stage for the rest of the epic's story.

**Kishkindha Kanda** the fourth chapter of the Ramayana, primarily focuses on the search for Sita, who was abducted by the demon king Ravana. This part of the epic describes the journey of Lord Rama and Lakshmana to the kingdom of Kishkindha, where they meet Hanuman and Sugriva. The Kishkindha Kanda narrates the alliance between Rama and Sugriva, the search for Sita, and the

battle with Vali, Sugriva's brother. It is a significant part of the Ramayana as it sets the stage for the events leading up to the war with Ravana.

**Sundara Kanda** the fifth chapter depicts the adventures of Hanuman, as he travels to Lanka in search of Sita. The Sundara Kanda also includes Hanuman's meeting with Sita, his destruction of parts of Lanka, and his interactions with Ravana's forces. This part of the Ramayana is significant for the pivotal role played by Hanuman and the events that lead to the eventual war between Rama and Ravana.

**Yuddha Kanda** is the sixth chapter of the Ramayana. It explains the Great War between Lord Rama and the demon king Ravana, culminating in the ultimate victory of Rama and the rescue of Sita. The Yuddha Kanda describes the preparations for the battle, the various confrontations between Rama's allies and Ravana's forces, and the ultimate showdown between Rama and Ravana. This part of the Ramayana is significant as it depicts the triumph of good over evil and the restoration of righteousness leading to the coronation of Rama at Ayodhya.

**Uttara Kanda** is the seventh and final chapter of the Ramayana. This section includes the return of Rama, Sita's exile, the birth of their twin sons, Lava and Kusha, and the reunion of Rama with his sons. The Uttara Kanda also includes Sita's return to the Earth. This part of the Ramayana provides closure to the epic and depicts the moral and ethical dilemmas faced by the characters.

The impact of the Ramayana on literature, philosophy, and society is truly profound and enduring. Throughout the ages, numerous writers and poets have been inspired by this epic tale. Notable figures like Bhaasa, Kalidasa, Bhavabhooti, Pampa, Kuvempu, and Masti Venkatesha Iyengar have created literary works that reflect the themes and characters of the Ramayana, showcasing its timeless relevance and universal appeal.

Additionally, revered sages and acharyas such as Shankaracharya, Madhvacharya, Ramanuja-charya, and others have drawn spiritual insights and philosophical lessons from the Ramayana, incorporating its teachings into their own works and teachings.

Moreover, the Ramayana's influence extends to social leaders and freedom fighters like Rabindranath Tagore, Sri Aurobindo, and Mahatma Gandhi, who found inspiration in its moral values and ideals. The Ramayana's depiction of righteousness, duty, and devotion continues to resonate with individuals seeking guidance and inspiration in their personal and societal lives.

The widespread translation of the Ramayana into multiple languages across India and the world further underscores its enduring legacy and universal appeal. This epic remains a beacon of cultural heritage, moral wisdom, and artistic excellence, transcending boundaries of time and geography to touch the hearts and minds of people across diverse cultures and generations.

The term 'Sriramodantam' is composed of the words 'Srirama' and 'udantam' meaning 'the story of Srirama'. Sriramodantam is a 'laghukavyam' (minor poetical composition). This Kavya, which is a highly abridged version of "Valmiki Ramayana", was used as a tool to teach effectively Vibhakti, Sandhi, Samasa. The work begins with the verse

श्रीपतिं प्रणिपत्याहं श्रीवत्साङ्कित–वक्षसम् ।
श्रीरामोदन्तमाख्यासे श्रीवाल्मीकिप्रकीर्तितम् ॥

It is a great pity that the author of Sriramodantam is unknown. The author, in his inimitable and simple style, has narrated, in just 200 verses, the seven kandas of Ramayana that was expounded by Valmiki in 24000 verses.

## श्रीराम–प्रार्थना

**रामो राजमणिः सदा विजयते रामं रमेशं भजे**
**रामेणाभिहता निशाचर–चमूः रामाय तस्मै नमः ।**
**रामान्नास्ति परायणं परतरं रामस्य दासोऽस्म्यहं**
**रामे चित्तलयस्सदा भवतु मे हे राम माम् उद्धर ॥**

**आपदामपहर्तारं दातारं सर्वसम्पदाम् ।**
**लोकाभिरामं श्रीरामं भूयो भूयो नमाम्यहम् ॥**

************

**प्रथमः पाठः**

## रामोदन्ते बालकाण्ड-सङ्ग्रहः

श्रीपतिं प्रणिपत्याहं श्रीवत्साङ्कित-वक्षसम् ।
श्रीरामोदन्तमाख्यास्ये श्रीवाल्मीकि-प्रकीर्तितम् ॥ १॥

पुरा विश्रवसः पुत्रो रावणो नाम राक्षसः ।
आसीदस्यानुजौ चास्तां कुम्भकर्णविभीषणौ ॥ २॥

ते तु तीव्रेण तपसा प्रत्यक्षीकृत्य वेधसम् ।
वव्रिरे च वरानिष्टानस्मादाश्रितवत्सलात् ॥३॥

रावणो मानुषादन्यैरवध्यत्वं तथानुजः ।
निर्देवत्वेच्छया निद्रां कुम्भकर्णोऽवृणीत च ॥ ४॥

विभीषणो विष्णुभक्तिं वव्रे सत्त्वगुणान्वितः ।
तेभ्य एतान्वरान्दत्त्वा तत्रैवान्तर्दधे प्रभुः ॥ ५॥

रावणस्तु ततो गत्वा रणे जित्वा धनाधिपम् ।
लङ्कापुरीं पुष्पकं च हृत्वा तत्रावसत्सुखम् ॥६॥

यातुधानास्ततः सर्वे रसातलनिवासिनः ।
दशाननं समाश्रित्य लङ्कायां सुखमावसन् ॥७॥

मन्दोदरीं मयसुतां परिणीय दशाननः ।
तस्यामुत्पादयामास मेघनादाह्वयं सुतम् ॥८॥

रसां रसातलं चैव विजित्य स तु रावणः ।
लोकानाक्रमयन् सर्वाञ्जहार च विलासिनीः ॥ ९॥

दूषयन्वैदिकं कर्म द्विजानर्दयति स्म सः ।
आत्मजेनान्वितो युद्धे वासवं चाप्यपीडयत् ॥ १०॥

तदीयतरुरत्नानि पुनरानाय्य किङ्करैः ।
स्थापयित्वा तु लङ्कायामवसच्च चिराय सः ॥ ११॥

ततस्तस्मिन्नवसरे विधातारं दिवौकसः ।
उपगम्योचिरे सर्वं रावणस्य विचेष्टितम् ॥१२॥

तदाकर्ण्य सुरैः साकं प्राप्य दुग्धोदधेस्तटम् ।
तुष्टाव च हृषीकेशं विधाता विविधैः स्तवैः ॥ १३॥

आविर्भूयाथ दैत्यारिः पप्रच्छ च पितामहम् ।
किमर्थमागतोऽसि त्वं साकं देवगणैरिति ॥ १४॥

ततो दशाननात्पीडामजस्तस्मै न्यवेदयत् ।
तच्छ्रुत्वोवाच धातारं हर्षयन्विष्टरश्रवाः ॥ १५॥

अलं भयेनात्मयोने गच्छ देवगणैः सह ।
अहं दाशरथिर्भूत्वा हनिष्यामि दशाननम् ॥१६॥

आत्मांशैश्च सुराः सर्वे भूमौ वानररूपिणः ।
जायेरन्मम साहाय्यं कर्तुं रावणनिग्रहे ॥ १७॥

एवमुक्त्वा विधातारं तत्रैवान्तर्दधे प्रभुः ।
पद्मयोनिस्तु गीर्वाणैः समं प्रायात्प्रहृष्टधीः ॥ १८॥

अजीजनत्ततः शक्रो वालिनं नाम वानरम् ।
सुग्रीवमपि मार्ताण्डो हनुमन्तं च मारुतः ॥ १९॥

पुरैव जनयामास जाम्बवन्तं च पद्मजः ।
एवमन्ये च विबुधाः कपीनजनयन्बहून् ॥२०॥

ततो वानरसङ्घानां वाली परिवृढोऽभवत् ।
अमीभिरखिलैः साकं किष्किन्धामध्युवास च ॥ २१॥

आसीद्दशरथो नाम सूर्यवंशेऽथ पार्थिवः ।
भार्यास्तिस्रोऽपि लब्ध्वासौ तासु लेभे न सन्ततिम् ॥२२॥

ततः सुमन्त्रवचनादृष्यशृङ्गं स भूपतिः ।
आनीय पुत्रकामेष्टिमारेभे सपुरोहितः ॥ २३॥

अथाग्नेरुत्थितः कश्चिद्गृहीत्वा पायसं चरुम् ।
एतत्प्राशय पत्नीस्त्वमित्युक्त्वाऽदान्नृपाय सः ॥ २४॥

तद्गृहीत्वा तदैवासौ पत्नीः प्राशयदुत्सुकः ।
ताश्च तत्प्राशनादेव नृपाद्गर्भमधारयन् ॥ २५॥

पूर्णे कालेऽथ कौसल्या सज्जनाम्भोजभास्करम् ।
अजीजनद्रामचन्द्रं कैकेयी भरतं तथा ॥ २६॥

ततो लक्ष्मणशत्रुघ्नौ सुमित्राजीजनत्सुतौ ।
अकारयत्पिता तेषां जातकर्मादिकं द्विजैः ॥ २७॥

ततो ववृधिरेऽन्योन्यं स्निग्धाश्चत्वार एव ते ।
सकलासु च विद्यासु नैपुण्यमभिलेभिरे ॥ २८॥

**॥ इति श्रीरामोदन्ते बालकाण्ड-सङ्ग्रहः समाप्तः ॥**

# ಶ್ರೀರಾಮೋದಂತ ಬಾಲಕಾಂಡಸಂಗ್ರಹ
# ಕನ್ನಡಾನುವಾದ

'ರಾಮೋದಂತ' ಎಂಬ ಈ ಗ್ರಂಥವನ್ನು ಯಾವ ಕವಿಯು ಬರೆದಿರುವುದೆಂಬುದು ಸ್ಪಷ್ಟವಾಗಿ ತಿಳಿದುಬಂದಿಲ್ಲ. ಆದರೂ ಈ ಗ್ರಂಥವು ನಮ್ಮ ದೇಶದ ಇತಿಹಾಸವಾದ ರಾಮಾಯಣದ ಬಗ್ಗೆ ಎಲ್ಲರಿಗೂ ಅರ್ಥವಾಗುವಂತೆ ಬಹಳ ಸರಳವಾಗಿ ನಿರೂಪಿತವಾಗಿದೆ. ಈ ಗ್ರಂಥವನ್ನು ಅಧ್ಯಯನ ಮಾಡುವುದರಿಂದ, ಇದರ ಮೂಲ ಗ್ರಂಥವಾದ ವಾಲ್ಮೀಕಿ ರಾಮಾಯಣವನ್ನು ಅಧ್ಯಯನ ಮಾಡಬೇಕೆಂಬ ಅಪೇಕ್ಷೆ ಉಂಟಾಗುತ್ತದೆ. ಈ ನಿಟ್ಟಿನಲ್ಲಿ ಈ ಗ್ರಂಥವು ಪದವಿಯ ಸ್ತರದಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲರಿಗೂ ಬಹಳ ಸಹಾಯಕವಾಗಿದೆ.

ಪೀಠಿಕೆ – ಭಾರತೀಯ ಸಂಪ್ರದಾಯದಂತೆ ಯಾವುದೇ ಕ್ರಿಯೆಯ ಆರಂಭದಲ್ಲಿ ದೇವರ ನಮಸ್ಕಾರವನ್ನು ಅವಶ್ಯವಾಗಿ ಮಾಡಲೇಬೇಕು. ಅದರಂತೆ ಈ ಶ್ಲೋಕದಲ್ಲಿ ಕವಿಯು ಶ್ರೀಪತಿಯಾದ ನಾರಾಯಣನನ್ನು ನಮಸ್ಕರಿಸುವ ಮೂಲಕ ಮಂಗಲಾಚರಣೆಯನ್ನು ಮಾಡುತ್ತಿದ್ದಾನೆ.

1. ನಾನು (ಕವಿಯು) ಎದೆಯ ಮೇಲೆ ಶ್ರೀವತ್ಸ ಚಿಹ್ನೆಯನ್ನು ಹೊಂದಿರುವ ಲಕ್ಷ್ಮೀಪತಿಯಾದ ನಾರಾಯಣನನ್ನು ನಮಸ್ಕರಿಸಿ, ಶ್ರೀವಾಲ್ಮೀಕಿಗಳು ವಿಸ್ತಾರವಾಗಿ ವಿವರಿಸಿರುವ ರಾಮನ ಚರಿತೆಯನ್ನು ವರ್ಣಿಸುತ್ತೇನೆ.
2. ಬಹಳ ಕಾಲದ ಹಿಂದೆ, ವಿಶ್ರವಸು ಎಂಬ (ಬ್ರಾಹ್ಮಣನಿಗೆ) ರಾವಣನೆಂಬ ಮಗನೊಬ್ಬನಿದ್ದನು. ಅವನು ರಾಕ್ಷಸ ಸ್ವಭಾವದವನು. ಅವನಿಗೆ ಕುಂಭಕರ್ಣ ಹಾಗೂ ವಿಭೀಷಣರೆಂಬ ತಮ್ಮಂದಿರು ಇದ್ದರು.
3. ಆ ಮೂವರೂ ಬಹಳ ಉತ್ಕಟವಾದ ತಪಸ್ಸನ್ನು ಆಚರಿಸಿ ಬ್ರಹ್ಮನನ್ನು ಪ್ರತ್ಯಕ್ಷೀಕರಿಸಿಕೊಂಡರು. ಭಕ್ತಪ್ರಿಯನಾದ ಆ ಬ್ರಹ್ಮನಿಂದ ತಮಗೆ ಇಷ್ಟವಾದ ವರಗಳನ್ನು ಪಡೆದರು.
4. ರಾವಣನು ಮನುಷ್ಯರನ್ನು ಹೊರತು ಪಡಿಸಿ ಬೇರೆ ಯಾರಿಂದಲೂ ತಾನು ಸಾಯಬಾರದು ಎಂಬ ವರವನ್ನು ಹೊಂದಿದನು. ಅವನ ತಮ್ಮನಾದ ಕುಂಭಕರ್ಣನು 'ಈ ಲೋಕದಲ್ಲಿ "ನಿರ್ದೇವತ್ವ" ಅಂದರೆ ಯಾವ ದೇವತೆಗಳೂ ಇರಬಾರದು' ಎಂಬ ವರವನ್ನು ಕೇಳಲು ಪ್ರವೃತ್ತನಾಗಿದ್ದ. ಆದರೆ ಬಾಯ್ತಪ್ಪಿ ನಿದ್ರಾವಸ್ಥೆ ಬೇಕೆಂದು ವರವನ್ನು ಕೇಳಿಕೊಂಡ.
5. ಆದರೆ ಸತ್ವಗುಣವನ್ನು ಹೊಂದಿದ್ದ ವಿಭೀಷಣನು ತನಗೆ ವಿಷ್ಣುಭಕ್ತಿ ಬೇಕೆಂಬ ವರವನ್ನು ಕೇಳಿಕೊಂಡನು. ಬ್ರಹ್ಮದೇವರು ಈ ಮೂವರಿಗೂ ಅವರಿಗೆ ಇಷ್ಟವಾದ ವರಗಳನ್ನು ನೀಡಿ ಅಲ್ಲಿಯೇ ಮಾಯವಾದರು.
6. ಅನಂತರ (ವರವನ್ನು ಪಡೆದ ಮೇಲೆ) ರಾವಣನು ಕುಬೇರನ ಬಳಿಗೆ ಹೋಗಿ ಯುದ್ಧದಲ್ಲಿ ಅವನನ್ನು ಗೆದ್ದನು. ಅವನ ಲಂಕಾಪಟ್ಟಣವನ್ನೂ, ಪುಷ್ಪಕವಿಮಾನವನ್ನೂ ವಶಪಡಿಸಿಕೊಂಡು ಆ ಲಂಕೆಯಲ್ಲಿಯೇ ಸುಖವಾಗಿ ವಾಸಮಾಡತೊಡಗಿದನು.
7. ಅಲ್ಲಿಯವರೆಗೂ ರಸಾತಳ ಲೋಕದಲ್ಲಿ ಅಡಗಿಕೊಂಡಿದ್ದ ರಾಕ್ಷಸರು ಹತ್ತುತಲೆಯ ರಾವಣನನ್ನು ಆಶ್ರಯಿಸಿ ಲಂಕೆಯಲ್ಲಿಯೇ ಸುಖವಾಗಿ ವಾಸಿಸತೊಡಗಿದರು.
8. ದಶಮುಖನಾದ ರಾವಣನು ಮಯನೆಂಬ ಅಸುರನ ಮಗಳಾದ ಮಂದೋದರಿಯನ್ನು (ಮಂಡೋದರಿಯನ್ನು) ಮದುವೆಯಾಗಿ, ಅವಳಲ್ಲಿ ಮೇಘನಾದನೆಂಬ ಮಗನನ್ನು ಪಡೆದನು.
9. ಆ ರಾವಣನು ಭೂಲೋಕವನ್ನೂ, ರಸಾತಲವನ್ನೂ ಗೆದ್ದು, ಎಲ್ಲ ಲೋಕಗಳನ್ನೂ ಆಕ್ರಮಿಸಿ, ಸುಂದರಿಯರಾದ ಬಹಳ ಸ್ತ್ರೀಯರನ್ನು ಹೊತ್ತೊಯ್ದನು.

10. ಆ ರಾವಣನು ವೇದೋಕ್ತವಾದ ಕ್ರಿಯೆಗಳನ್ನು ವಿರೋಧಿಸುತ್ತಿದ್ದನು. ಬ್ರಾಹ್ಮಣರನ್ನು ಹಿಂಸಿಸುತ್ತಿದ್ದನು. ತನ್ನ ಮಗನಾದ ಮೇಘನಾದನೊಂದಿಗೆ ಕೂಡಿಕೊಂಡು ಇಂದ್ರನನ್ನೂ ಪೀಡಿಸಿದನು.
11. ಆ ರಾವಣನು, ಇಂದ್ರನಿಗೆ ಸೇರಿದ ಕಲ್ಪವೃಕ್ಷವನ್ನೂ, ಅಮೂಲ್ಯವಾದ ರತ್ನಗಳನ್ನೂ ತನ್ನ ಸೇವಕರಿಂದ ಲಂಕೆಗೆ ತರಿಸಿ, (ಅಂದವಾಗಿ) ಜೋಡಿಸಿ, ಬಹಳ ಕಾಲದವರೆಗೂ ವಾಸಿಸಿದನು.
12. ಆ ಸಮಯದಲ್ಲಿ ದೇವತೆಗಳು ಚತುರ್ಮುಖ ಬ್ರಹ್ಮನನ್ನು ಸಮೀಪಿಸಿ, ರಾವಣನ ಎಲ್ಲ ದುಷ್ಕೃತ್ಯಗಳನ್ನೂ ನಿವೇದಿಸಿದರು.
13. ಆ ಎಲ್ಲ ವಿಚಾರಗಳನ್ನೂ ಆಲಿಸಿದ ಬ್ರಹ್ಮದೇವರು, ದೇವತೆಗಳೊಂದಿಗೆ ಕ್ಷೀರಸಮುದ್ರದ ತೀರಕ್ಕೆ ಬಂದು ನಾನಾ ವಿಧವಾದ ಸ್ತೋತ್ರಗಳಿಂದ ಹೃಷೀಕೇಶನೆನಿಸಿರುವ (ಎಲ್ಲರ ಇಂದ್ರಿಯಗಳನ್ನೂ ನಿಯಂತ್ರಿಸುವವನು. 'ಹೃಷೀಕಂ ವಿಷಯೇಂದ್ರಿಯಮ್' ಇತಿ ಕೋಶಃ) ನಾರಾಯಣನನ್ನು ಸಂತೋಷಗೊಳಿಸಿದರು.
14. ಆಗ, ದೈತ್ಯರ ಶತ್ರುವಾದ ನಾರಾಯಣನು ಪ್ರತ್ಯಕ್ಷ ಗೋಚರನಾಗಿ 'ಎಲೈ ಬ್ರಹ್ಮದೇವರೇ, ತಾವು ಎಲ್ಲ ದೇವತೆಗಳೊಂದಿಗೆ ಸೇರಿಕೊಂಡು ಇಲ್ಲಿಗೆ ಬಂದ ಕಾರಣವಾದರೂ ಏನು?' ಎಂದು ಕೇಳಿದನು.
15. ಅನಂತರ ಬ್ರಹ್ಮದೇವರು, ದಶಾನನನಿಂದ ಎಲ್ಲ ದೇವತೆಗಳಿಗೆ ಉಂಟಾಗಿರುವ ಪೀಡನೆಯನ್ನು ನಾರಾಯಣನಿಗೆ ತಿಳಿಸಿದರು. ಅದನ್ನು ಕೇಳಿದ ವೈಕುಂಠಾಧಿಪತಿಯು ಎಲ್ಲರನ್ನು ಸಂತೋಷಪಡಿಸುತ್ತಾ ಹೀಗೆ ನುಡಿದನು.
16. ಎಲೈ, ಆತ್ಮಯೋನಿಯೆನಿಸಿರುವ ಬ್ರಹ್ಮದೇವರೇ, ನೀವು ಆತಂಕ, ಭಯ ಎಲ್ಲವನ್ನೂ ಬಿಟ್ಟುಬಿಡಿ. ನಿಮ್ಮ ನಿಮ್ಮ ಸ್ಥಾನಗಳಿಗೆ ಸಾಗಿ. ನಾನು ದಶರಥನ ಮಗನಾಗಿ ಹುಟ್ಟಿ ದಶಮುಖನನ್ನು ಸಂಹರಿಸುತ್ತೇನೆ.
17. ರಾವಣನನ್ನು ಸಂಹರಿಸುವ ಕಾರ್ಯದಲ್ಲಿ ನನಗೆ ಸಹಾಯಮಾಡಲು ಎಲ್ಲ ದೇವತೆಗಳು ತಮ್ಮ ತಮ್ಮ ಅಂಶಗಳಿಂದ ಭೂಮಿಯಲ್ಲಿ ವಾನರರಾಗಿ ಹುಟ್ಟಲಿ.
18. ಸರ್ವ ಸಮರ್ಥನಾದ ಶ್ರೀಹರಿಯು ಹೀಗೆ ನುಡಿದು ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು. ಪದ್ಮಯೋನಿಯಾದ ಬ್ರಹ್ಮದೇವರು ಅತ್ಯಂತ ಸಂತೋಷಗೊಂಡವರಾಗಿ ದೇವತೆಗಳೊಂದಿಗೆ ಹೊರಟರು.
19. ಅನಂತರ ಇಂದ್ರನು ತನ್ನ ಅಂಸದಿಂದ ವಾಲಿಯೆಂಬ ಹೆಸರಿನ ಕಪಿಯನ್ನು ಹುಟ್ಟಿಸಿದನು. ಸೂರ್ಯನು ತನ್ನ ಅಂಶದಿಂದ ಸುಗ್ರೀವನನ್ನೂ, ವಾಯುದೇವನು ತನ್ನ ಅಂಶದಿಂದ ಹನೂಮಂತನನ್ನೂ ಹುಟ್ಟಿಸಿದರು.
20. ಬಹಳ ಹಿಂದೆಯೇ ಬ್ರಹ್ಮದೇವರು ಜಾಂಬವಂತನೆಂಬ ಕರಡಿಯನ್ನು ಸೃಷ್ಟಿಸಿದ್ದರು. ಇದೇ ರೀತಿಯಲ್ಲಿಯೇ ಇತರ ದೇವತೆಗಳು ತಮ್ಮ ಅಂಶಗಳಿಂದ ಬಹಳ ಕಪಿಗಳನ್ನು ಸೃಷ್ಟಿಸಿದರು.
21. ಅನಂತರ ವಾಲಿಯು ಎಲ್ಲ ವಾನರಸಮೂಹಕ್ಕೆ ರಾಜನಾದನು. ಅವರೆಲ್ಲರಿಂದ ಕೂಡಿಕೊಂಡು ಕಿಷ್ಕಿಂಧೆಯಲ್ಲಿ ವಾಸಿಸತೊಡಗಿದನು.
22. ಹೀಗಿರುವಾಗ, ಸೂರ್ಯವಂಶದಲ್ಲಿ ದಶರಥನೆಂಬ ರಾಜನಿದ್ದನು. ಅವನಿಗೆ ಮೂವರು ಪತ್ನಿಯರಿದ್ದರು. ಆದರೂ ಆ ಪತ್ನಿಯರಲ್ಲಿ ಸಂತತಿಯನ್ನು ಪಡೆಯಲಾಗಲಿಲ್ಲ.
23. ಕಾಲ ಕಳೆಯುತ್ತಿದ್ದಂತೆ, ಆ ದಶರಥ ರಾಜನು ತನ್ನ ಆಪ್ತನಾದ ಸುಮಂತ್ರನ ಮಾತಿನಂತೆ ಋಷ್ಯಶೃಂಗನೆಂಬ ಋಷಿಯನ್ನು ಕರೆಸಿ, ಅನೇಕ ಪುರೋಹಿತರೊಡನೆ ಕೂಡಿಕೊಂಡು ಪುತ್ರಕಾಮೇಷ್ಟಿಯನ್ನು ಆರಂಭಿಸಿದನು.

24. ಆ ಯಜ್ಞವು ನಡೆಯುವ ಸಂದರ್ಭದಲ್ಲಿ ಅಗ್ನಿಕುಂಡದಿಂದ ಯಜ್ಞಪುರುಷನು ಎದ್ದು ಬಂದನು. ಅವನು ತನ್ನ ಕೈಗಳಲ್ಲಿ ಚರುರೂಪವಾದ ಪಾಯಸವನ್ನು ಹಿಡಿದಿದ್ದನು. 'ಎಲೈ ದಶರಥನೇ, ನೀನು ಈ ಪಾಯಸವನ್ನು ನಿನ್ನ ಮೂವರು ಪತ್ನಿಯರಿಗೆ ನೀಡು' ಎಂದು ನುಡಿದು ಆ ರಾಜನಿಗೆ ಕೊಟ್ಟನು.
25. ಆಗ ಅತ್ಯಂತ ಸಂತುಷ್ಟನಾದ ರಾಜನು ಬಹಳ ಉತ್ಸಾಹದಿಂದ ಅದನ್ನು ಸ್ವೀಕರಿಸಿ ತನ್ನ ಹೆಂಡತಿಯರಿಗೆ ನೀಡಿದನು. ಅವರು ಆ ಪಾಯಸವನ್ನು ಕುಡಿದ ಪ್ರಭಾವದಿಂದ ರಾಜನಿಂದ ಗರ್ಭವನ್ನು ಧರಿಸಿದರು.
26. ಗರ್ಭದ ಸಮಯವು ಪೂರ್ಣವಾಗುತ್ತಿರಲು, ಕೌಸಲ್ಯಾದೇವಿಯು ಸಜ್ಜನರೆಂಬ ಕಮಲಗಳಿಗೆ ಸೂರ್ಯನಂತೆ ಹಿತ ನೀಡುವ ಶ್ರೀರಾಮಚಂದ್ರನಿಗೆ ಜನ್ಮ ನೀಡಿದಳು. ಹಾಗೆಯೇ ಕೈಕೇಯಿಯು ಭರತನಿಗೆ ಜನ್ಮ ನೀಡಿದಳು.
27. ಅನಂತರ ಸುಮಿತ್ರೆಯು ಲಕ್ಷ್ಮಣ ಶತ್ರುಘ್ನರಿಗೆ ಜನ್ಮ ಕೊಟ್ಟಳು. ಆ ಮಕ್ಕಳ ತಂದೆಯಾದ ದಶರಥನು ಅನೇಕ ಬ್ರಾಹ್ಮಣರನ್ನು ಕರೆಸಿ ಜಾತಕರ್ಮವೇ ಮೊದಲಾದ ಕ್ರಿಯೆಗಳನ್ನು ಮಾಡಿಸಿದನು.
28. ಅನಂತರ ಆ ನಾಲ್ವರೂ ಪರಸ್ಪರ ಅತ್ಯಂತ ಪ್ರೀತಿಯುಳ್ಳವರಾಗಿ ಬೆಳೆದರು. ಎಲ್ಲ ರೀತಿಯ ವಿದ್ಯೆಗಳಲ್ಲೂ ಕೌಶಲ್ಯವನ್ನು ಪಡೆದರು.

**ಎಂಬಲ್ಲಿಗೆ ರಾಮೋದಂತ ಎಂಬ ಕಾವ್ಯದಲ್ಲಿ ಬಾಲಕಾಂಡಸಂಗ್ರಹವು ಸಮಾಪ್ತವಾಯಿತು**

## English Translation

1. Bowing to Lakshmi's consort, Vishnu, who has a mark, Srivatsa, on his chest, I shall relate the story of Sri Rama, as narrated by Valmiki.
2. Long ago there was a Rakshasa2 named Ravana who was the son of sage Visravas. Ravana's younger brothers were Kumbhakarna and Vibheeshana.
3. By their severe penance, they made Brahma appear before them and asked for desired boons from Brahma who is affectionate towards his devotees.
4. Ravana chose not to be killed by anyone except humans. Kumbhakarna wanted to surpass all devas, instead asked for constant sleep, by slip of tongue.
5. Vibheeshana, who was endowed with noble qualities, asked for devotion to Vishnu. Giving them these boons, Brahma disappeared.
6. Ravana then won a battle against the Lord of riches, Kubera, took from him the city of Lanka and the Pushpaka4 and lived there happily.
7. Then, all the Rakshasas who were living in Rasatala, took refuge in ten-headed Ravana and lived happily in Lanka.
8. Ravana married Mandodari, daughter of Maya, and begot a son in her called, Meghanada.
9. Ravana conquered the earth and Rasatala, tormented all the worlds and carried away the beautiful women.
10. Dishonoring the Vedic rituals, Ravana oppressed the twice-born. Accompanied by his son, he defeated Devendra in battle.

11. Fetching the wish-yielding trees (from Heaven) through his servants, Ravana planted them in Lanka and lived there for a long time.
12. Devas, then, approached Brahma and related to him all the misdeeds of Ravana.
13. Having heard their woes, Brahma went with devas to the shores of the ocean of milk. propitiated Vishnu by various hymns.
14. Then Vishnu, the enemy of Asuras, appeared before them and asked Brahma why he had come there with devas.
15. Then Brahma told Vishnu about the troubles caused by Ravana. Hearing that, Vishnu cheered up Brahma and said:
16. "Enough of the fears, Oh Brahma, Oh Brahma, go back along with devas. I will take birth as son of King Dasaratha and will kill the ten-headed Ravana."
17. "Let all devas, through part of their souls, take birth as monkeys on the earth to help me in slaying Ravana."
18. Having spoken thus to Brahma, Vishnu disappeared. Brahma gladly went back along with devas.
19. Devendra created a monkey named Vali, Sun created Sugreeva and Vayu created Hanuman.
20. Brahma had created Jambavan long ago. Similarly all other devas reated numerous monkeys.
21. Vali became the leader of those monkeys and with all of them inhabited Kishkindha.
22. There was a king called Dasaratha who belonged to the clan of the sun. Though he had three wives, he had no sons.
23. Then, on the advice of Sumantra, he brought sage Rishyasringa and got Putrakameshti conducted with Rishyasringa as the priest.
24. From the fire arose a divine being, holding in his hand a cup of milk porridge and gave it to the king saying "Feed this to your wives.
25. He took it and fed his wives the porridge immediately. As a result, the queens became pregnant through the king.
26. In due course, Kausalya gave birth to Ramachandra, who was a source of joy to virtuous men like Sun to lotus. Kaikeyi gave birth to Bharata.
27. Then, Sumitra gave birth to twins, Lakshmana and Satrughna. The king got their birth-ceremonies and other rituals performed by the priests.
28. The four princes grew up and were affectionate with one another. They gained mastery in all branches of learning.

**Thus ends the chapter on childhood of Rama**

## द्वितीयः पाठः

# गजेन्द्रमोक्षसङ्ग्रहः

### ಪೀಠಿಕೆ

**ಗಜೇಂದ್ರಮೋಕ್ಷದ ಕಥಾವಸ್ತು :**

'ಗಜೇಂದ್ರಮೋಕ್ಷ' ಎಂಬುದು, **ಗೀತಾ ಸಹಸ್ರನಾಮೈವ ಸ್ತವರಾಜೋ ಹ್ಯನುಸ್ಮೃತಿಃ । ಗಜೇಂದ್ರಮೋಕ್ಷಣಂ ಚೈವ ಪಂಚರತ್ನಾನಿ ಭಾರತೇ ॥** ಎಂಬಂತೆ ಮಹಾಭಾರತದ ಪಂಚರತ್ನಗಳಾದ ಭಗವದ್ಗೀತಾ, ವಿಷ್ಣು ಸಹಸ್ರನಾಮ, ಭೀಷ್ಮಕೃತಸ್ತವರಾಜ, ಅನುಗೀತಾ ಮತ್ತು ಗಜೇಂದ್ರಮೋಕ್ಷ– ಇವುಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದೆ. ಈ ಕಥೆಯು ಅಷ್ಟಾದಶಪುರಾಣಗಳಲ್ಲಿ ಮುಖ್ಯವಾದ ಶ್ರೀಮದ್ಭಾಗವತದ ಎಂಟನೇ ಸ್ಕಂದದಲ್ಲಿಯೂ ಬರುತ್ತದೆ. ಈ ಕಥೆಯನ್ನು ಶುಕಬ್ರಹ್ಮರ್ಷಿಗಳು ಮಹಾರಾಜ ಪರೀಕ್ಷಿತನಿಗೆ ಹೇಳುತ್ತಾರೆ. ಮೊಸಳೆಯೊಂದರ ಬಾಯಿಗೆ ಸಿಲುಕಿ ಬಿಡಿಸಿಕೊಳ್ಳಲು ಹೆಣಗಾಡುತ್ತಿದ್ದ ಭಕ್ತಶ್ರೇಷ್ಠನಾದ ಗಜರಾಜನ ಆರ್ತನಾದವನ್ನು ಕೇಳಿ ಶ್ರೀವಿಷ್ಣುವು ವೈಕುಂಠದಿಂದ ಧರೆಗಿಳಿದು ಬಂದು ಮೊಸಳೆ ಯನ್ನು ಕೊಂದು ಗಜರಾಜನನ್ನು ರಕ್ಷಿಸಿದ ಮತ್ತು ಶ್ರೀವಿಷ್ಣುವಿನ ಅನುಗ್ರಹದಿಂದ ಈ ಸಂಸಾರಚಕ್ರದಿಂದ ಪಾರಾಗಿ ಭಗವಂತನ ಸಾಲೋಕ್ಯವನ್ನು ಪಡೆದು ಅವನ ಪಾರ್ಷದರಲ್ಲಿ ಒಬ್ಬನಾಗಿ ಹೋದ ಗಜೇಂದ್ರನ ಕಥೆ ಇದಾಗಿದೆ. ಆರ್ತತೆ, ಮೊರೆ, ಸ್ತುತಿ– ಇವೆಲ್ಲವೂ ಭಕ್ತಿಭಾವ ರಸದಿಂದ ತುಂಬಿರುವುದಾಗಿದೆ. ಅದರಲ್ಲಿ ಮಗ್ನರಾದವರಿಗೆ ಮೋಕ್ಷವನ್ನು ದಯಪಾಲಿಸುವ ಸಾಮರ್ಥ್ಯವನ್ನು ಹೊಂದಿರುವ ಪ್ರಸಂಗವೆಂದು ಭಕ್ತರು ಮತ್ತು ಭಾವುಕರು ಕೊಂಡಾಡುತ್ತಾರೆ.

ಗಜೇಂದ್ರನು, ತನ್ನ ಹಿಂದಿನ ಜನ್ಮದಲ್ಲಿ ಶ್ರೇಷ್ಠ ವಿಷ್ಣುಭಕ್ತನಾದ ಇಂದ್ರದ್ಯುಮ್ನನೆಂಬ ಮಹಾರಾಜನಾಗಿದ್ದನು. ಅಗಸ್ತ್ಯಮಹರ್ಷಿಗಳಿಗೆ ತೋರಿದ ಅಗೌರವದ ಕಾರಣ ಅವರಿಂದ ಶಪಿತನಾಗಿ ಗಜವಾಗಿ ಜನ್ಮತಾಳಿದ್ದನು. ಆದರೆ, ಹಿಂದಿನ ಸಂಸ್ಕಾರ ಬಲದಿಂದ ಭಗವಂತನನ್ನು ಸ್ತುತಿಸಿ ಮೋಕ್ಷವನ್ನು ಪಡೆದನು.

ಅಂತೆಯೇ, ಮೊಸಳೆಯೂ ಕೂಡ ಹೂಹೂ ಎಂಬ ಗಂಧರ್ವನಾಗಿದ್ದನು. ಋಷಿದೇವಲರಲ್ಲಿ ಅವಿನಯದಿಂದ ನಡೆದುಕೊಂಡಿದ್ದರಿಂದ, ಅವರಿಂದ ಶಪಿತನಾಗಿ ನಕ್ರಜನ್ಮವನ್ನು ತಾಳಿದ್ದನು. ಅವನಿಗೂ, ಭಗವಂತನ ಕರುಣೆಯಿಂದ ಶಾಪ ವಿಮೋಚನೆಯಾಯಿತು.

ಭಾಗವತೋತ್ತಮರಿಂದ ಪ್ರತಿದಿನ ಪ್ರಾತಃಕಾಲ ಪಠಿಸಲ್ಪಡುವ, ಹದಿಮೂರನೇ ಶತಮಾನದವರಾದ ನಡಾದೂರ್ ಅಮ್ಮಾಳ್‌ರವರಿಂದ ರಚಿಸಲ್ಪಟ್ಟಿರುವ ಈ ಎರಡು ಶ್ಲೋಕಗಳಲ್ಲಿ ಗಜೇಂದ್ರಮೋಕ್ಷದ ಕಥೆಯು ಸಂಗ್ರಹಿತವಾಗಿರುವುದು ಸ್ಮರಣೀಯ –

**"ग्राहग्रस्ते गजेन्द्रे रुवति सरभसं तार्क्ष्यमारुह्य धावन्**
**व्याघूर्णन्माल्यभूषावसनपरिकरो मेघगंभीरघोषः ।**
**आबिभ्राणो रथाङ्गं शरमसिमभयं शङ्खचापौ सखेटौ**
**हस्तैः कौमोदकीमप्यवतु हरिरसौ अंहसां संहतेर्नः ॥**
**नक्राक्रान्ते करीन्द्रे मुकुलितनयने मूलमूलेति खिन्ने**
**नाहं नाहं न चाहं न च भवति पुनस्तादृशो मादृशेषु ।**
**इत्येवं त्यक्तहस्ते सपदि सुरगणे भावशून्ये समस्ते**
**मूलं यत्प्रादुरासीत् स दिशतु भगवान् मङ्गलं सन्ततं नः ॥**

ಗಜೇಂದ್ರನು ನಕ್ರಗ್ರಸ್ತನಾಗಿರಲು, ತನ್ನ ರಕ್ಷಣೆಗೆಂದು 'ಮೂಲಮೂಲ' ಎಂದು ಸಂಬೋಧಿಸಿ ಕರೆದಾಗ, ದೇವತೆಗಳೆಲ್ಲರೂ 'ನಾನಲ್ಲ, ನಾನಲ್ಲ' ಎಂದು ಹಿಂದೆ ಸರಿದು ಕೈ ಒದರಿಕೊಂಡಾಗ ಯಾವ ಆದಿದೇವನಾದ ಮಹಾವಿಷ್ಣುವು ಗರುಡವಾಹನನಾಗಿ, ಶಂಖಚಕ್ರಗದಾಖಡ್ಗಧನುರ್ಬಾಣಗಳನ್ನು ತನ್ನ ಕೈಗಳಲ್ಲಿ ಹಿಡಿದು ಧಾವಿಸಿ ಬಂದು ಮೊಸಳೆಯನ್ನು ಸಂಹರಿಸಿ ಗಜೇಂದ್ರನನ್ನು ಉದ್ಧರಿಸಿದನೋ, ಆ ಭಗವಂತನಾದ ಶ್ರೀಮಹಾವಿಷ್ಣುವು ನಮ್ಮೆಲ್ಲಾ ತೊಂದರೆಗಳನ್ನು ನಿವಾರಿಸಲಿ.

**ಕವಿ–ಕಾವ್ಯ ಪರಿಚಯ :**

ಶ್ರೀ ಶ್ರೀ ರಂಗಪ್ರಿಯ ಶ್ರೀ ಶ್ರೀಯವರ ಪೂರ್ವಾಶ್ರಮದ ಹೆಸರು 'ಎಚ್.ಎಸ್. ವರದದೇಶಿಕಾಚಾರ್ಯರಂಗಪ್ರಿಯ' ಎಂಬುದಾಗಿ. ಇವರು ತಮ್ಮ ಆಧ್ಯಾತ್ಮಗುರುಗಳಾದ ಶ್ರೀರಂಗಮಹಾಗುರುಗಳಿಂದ ಅನುಗೃಹೀತರಾಗಿ ಅಧ್ಯಾತ್ಮಮಾರ್ಗದಲ್ಲಿ ಬಹಳ ಮುಂದುವರೆದಿದ್ದವರು. ಇವರು ಶ್ರೀರಂಗಮಹಾಗುರುಗಳ ಅತ್ಯಂತಪ್ರೀತಿಯ, ಮೆಚ್ಚುಗೆಯ ಶಿಷ್ಯರಾದುದರಿಂದ ಇವರಿಗೆ "ರಂಗಪ್ರಿಯ" ಎಂಬ ಅನ್ವರ್ಥ ಅಭಿಧಾನವನ್ನು ಶ್ರೀಗುರುಗಳು ದಯಪಾಲಿಸಿದ್ದರು. ಅಂದಿನಿಂದ ಇವರು 'ವರದದೇಶಿಕಾಚಾರ್ಯ ರಂಗಪ್ರಿಯ' ಎಂದೇ ಹೆಸರು ವಾಸಿಯಾದರು. ಸಂನ್ಯಾಸಸ್ವೀಕಾರಾನಂತರ ಇವರು ಶ್ರೀರಂಗಮಹಾಗುರುಗಳು ದಯಪಾಲಿಸಿದ್ದ ಅಭಿಧಾನದಿಂದಲೇ ಪ್ರಖ್ಯಾತರಾದರು.

ಇವರು ಬಾಲ್ಯದಿಂದಲೇ ಅತ್ಯಂತ ಪ್ರತಿಭಾವಂತರೂ, ವಿನಯಶೀಲರೂ, ಬುದ್ಧಿವಂತರೂ, ವಾಗ್ಮಿಗಳೂ, ಪ್ರವಚನಪಟುಗಳೂ ಆಗಿದ್ದರು. ಇವರಲ್ಲಿ ಆತ್ಮಗುಣಗಳ ಜೊತೆಗೆ ಸಜ್ಜನಿಕೆಯೂ ಮನೆ ಮಾಡಿತ್ತು. ಎಲ್ಲಕ್ಕಿಂತ ಮಿಗಿಲಾಗಿ ಭಗವದ್ಭಕ್ತರೂ, ಭಾಗವತರೂ ಆಗಿದ್ದರು. ಇವರು ಮೈಸೂರಿನಲ್ಲಿ ತಮ್ಮ ಇಂಟರ್‌ಮೀಡಿಯೇಟ್ ಪರೀಕ್ಷೆಯನ್ನು ಮುಗಿಸಿದಾಗ ಇವರ ವಯಸ್ಸು ಸುಮಾರು ಹದಿನೆಂಟು ಇದ್ದಿರಬಹುದು. ಇವರು ಲೌಕಿಕವಿದ್ಯಾಭ್ಯಾಸದ ಜೊತೆಗೆ ಸಂಸ್ಕೃತಾಧ್ಯಯನವನ್ನು ಮೈಸೂರಿನಲ್ಲೇ ಇರುವ ಶ್ರೀಮನ್ಮಹಾರಾಜಸಂಸ್ಕೃತಮಹಾಪಾಠಶಾಲೆಯಲ್ಲಿ ಮಾಡುತ್ತಿದ್ದರು, ವಿದ್ಯಾಭ್ಯಾಸ ಕಾಲದಲ್ಲೇ ಇವರಿಗೆ ಸಂಸ್ಕೃತಭಾಷೆಯು ತಮ್ಮ ಮಾತೃಭಾಷೆಯಂತೆಯೇ ಸುಲಲಿತವಾಗಿ ಒಲಿದು ಕರತಲಾಮಲಕದಂತೆ ಸಂಸ್ಕೃತಭಾಷೆಯಲ್ಲೇ ನಿರರ್ಗಳವಾಗಿ ಮಾತನಾಡುವುದು ಅಭ್ಯಾಸವಾಗಿ ಬಿಟ್ಟಿತ್ತು. ಇಷ್ಟೇ ಅಲ್ಲದೆ ಇವರಿಗೆ ವಿದ್ಯಾಧಿದೇವನ ಕರುಣೆಯೋ ಎಂಬಂತೆ ಅವನ ಒಲವು ಒದಗಿ ಬಂದು ಸಂಸ್ಕೃತ ಭಾಷೆಯಲ್ಲಿ ಕಾವ್ಯವನ್ನೂ (ರಚನೆ) ಮಾಡುವ ಸಾಮರ್ಥ್ಯವನ್ನೂ ಪಡೆದಿದ್ದರು. ಕಾವ್ಯವನ್ನು ರಚಿಸಲು ಇರಬೇಕಾದ ರಸ, ಭಾವಗಳೂ ಅವರಲ್ಲಿ ತುಂಬಿದ್ದವು. ಭಾವಪೂರ್ಣವಾದ ಹೃದಯವೂ ಅವರಿಗಿದ್ದಿತು. ಈ "ಗಜೇಂದ್ರಮೋಕ್ಷ" ಕಾವ್ಯವು ಶ್ರೀಸ್ವಾಮಿಗಳ ಹೃದಯಭೂಮಿಕೆಯಿಂದ ಹರಿದು ಬಂದ ಸುಲಲಿತವಾದ, ಭಕ್ತಿರಸಪರಿಪೂರ್ಣವಾದ, ಸುಂದರವಾದ ಕಾವ್ಯವಾಗಿದೆ. ಈ ಕಾವ್ಯಸುಧೆಯು ರಚಿತವಾಗಿ, ಭಗವದರ್ಪಿತವಾದ ಸನ್ನಿವೇಶವು ಸಂಸ್ಮರಣೀಯವಾಗಿದೆ. ಆ ಸಂಸ್ಮರಣೀಯವಾದ ಸನ್ನಿವೇಶ ಇಂತಿದೆ.

ಒಮ್ಮೆ ಸಂಸ್ಕೃತ ಪಾಠಶಾಲೆಯಲ್ಲಿ ಸಂಸ್ಕೃತದಲ್ಲೇ ಕಾವ್ಯ ರಚಿಸುವ ಸ್ಪರ್ಧೆಯನ್ನು ಆಯೋಜಿಸಿದ್ದರಂತೆ. ಶ್ರೀಸ್ವಾಮಿಗಳು ತಾವೂ ಕೂಡ ಒಂದು ಕಾವ್ಯವನ್ನು ರಚಿಸಲು ಇದು ಸುಸಂದರ್ಭ ಎಂದು ನಿಶ್ಚಯಿಸಿ ಸಂತೋಷದಿಂದ ಭಾಗವಹಿಸಿದರಂತೆ. ಭಗವದ್ರಸಪೂರ್ಣವಾದ ಒಂದು ಕಾವ್ಯವನ್ನು ರಚಿಸಿ ತಮ್ಮ ಗುರುಗಳಿಗೆ ಮೊದಲು ಸಮರ್ಪಿಸಿ ಅವರ ಆಶೀರ್ವಾದ ಪಡೆದು ನಂತರ ಸ್ಪರ್ಧೆಗೆ ಕಳುಹಿಸಲು ಸಂಕಲ್ಪಮಾಡಿ ಕಾವ್ಯರಚನೆಯಲ್ಲಿ ತೊಡಗಿದರಂತೆ. ಹಗಲಿನಲ್ಲಿ ಕಾವ್ಯರಚನೆಯಲ್ಲಿ ತೊಡಗಿದರೆ ಸಹಪಾಠಿಗಳಲ್ಲಿ ಕುತೂಹಲ ಉಂಟಾಗಿ, ಅದನ್ನು ನೋಡಿ, ಅದರ ಬಗ್ಗೆ ಟೀಕೆ, ಟಿಪ್ಪಣಿ, ಕುಚೋದ್ಯ ಮುಂತಾದುವುಗಳಿಗೆ ಅವಕಾಶವಾಗಿ ಕಾವ್ಯರಚನೆಗೆ ತೊಡಕುಂಟಾಗ ಬಹುದೆಂದು ಭಾವಿಸಿ ಆತಂಕ, ಸಂಕೋಚಗಳಿಗೊಳಗಾಗಿ ಎಲ್ಲರೂ ಮಲಗಿದ ನಂತರ ರಾತ್ರಿ ಹೊತ್ತಿನಲ್ಲಿ ಕಾವ್ಯರಚನೆಗೆ ತೊಡಗಿದರಂತೆ. ಅವರು ಆರಿಸಿಕೊಂಡ ಕಾವ್ಯವಸ್ತು "ಗಜೇಂದ್ರಮೋಕ್ಷ". ಮೂರು ಘಟ್ಟಗಳನ್ನು

ವರ್ಣನೆಗಳಿಗೆ ವಿಷಯವನ್ನಾಗಿ ತೆಗೆದು ಕೊಂಡರು. (i) ಗ್ರಾಹಗ್ರಸ್ತನಾದ ಗಜೇಂದ್ರನ ಸಂಕಷ್ಟದ ವೃತ್ತಾಂತ, (ii) ಗಜೇಂದ್ರನಿಂದ ಮೂಲಪರಂಜ್ಯೋತಿಯಲ್ಲಿ ಮೊರೆ ಮತ್ತು (iii) ಸ್ತೋತ್ರ ಮತ್ತು ಆತನಿಗೆ ದೊರೆತ ಮುಕ್ತಿಫಲ. ಇವುಗಳನ್ನು ಹೃದಯಂಗಮವಾಗಿ ವರ್ಣಿಸಿರುವ ಸುಂದರವಾದ ಕಾವ್ಯವು ಮೂರೇ ದಿವಸಗಳಲ್ಲಿ ಸಿದ್ಧವಾಯಿತು.

ತಾವು ಮೊದಲೇ ಸಂಕಲ್ಪಿಸಿದ್ದಂತೆ ಈ ಕೃತಿಯನ್ನು ತಮ್ಮ ಆರಾಧ್ಯದೈವವೂ, ಜೀವನಸರ್ವಸ್ವವೂ ಭಗವಂತನ ಸ್ವರೂಪರೂ ಆಗಿದ್ದ ಗುರುವರೇಣ್ಯರಾದ ಶ್ರೀರಂಗ ಮಹಾಗುರುಗಳಿಗೆ ಸಮರ್ಪಿಸಲು ಅವರ ವಾಸಸ್ಥಾನವಾಗಿದ್ದ ಶ್ರೀಕ್ಷೇತ್ರಹೆಡತಲೆಗೆ ಹೊರಟು ಬಂದರು. ಶ್ರೀಗುರುವಿನ ಸನ್ನಿಧಾನದಲ್ಲಿ ಈ ಕಾವ್ಯವನ್ನು ಓದಬೇಕೆಂದು ಬಿನ್ನವಿಸಿಕೊಂಡಾಗ ಅವರು ಪ್ರಸನ್ನತೆಯಿಂದ ತಮ್ಮ ಖಾಸಗಿ ಕೋಣೆಗೆ ಕರೆದುಕೊಂಡು ಹೋಗಿ ಕೇಳಲು ಸಿದ್ಧರಾಗಿ ತಮ್ಮ ಮೃದುಮಧುರವಾದ ವಾಣಿಯಿಂದ "ವಾಶಿಕ ಲಾಂಪಾ" [ಓದಬಹುದಪ್ಪಾ] ಎಂದು ಕಾವ್ಯವಾಚನಕ್ಕೆ ಆದಿಮಂಗಳವನ್ನು ಹಾಡಿದರಂತೆ. ಕಾವ್ಯವು "ಲಕ್ಷ್ಮೀ-ಲಾವಣ್ಯ-ಸಿಂಧೋಃ" ಎಂಬುದಾಗಿ 'ಲಕ್ಷ್ಮೀ' ಎಂಬ ಪದದಿಂದಲೇ ಮಂಗಳಾರಂಭವಾಗಿ ಮನೋಲ್ಲಾಸವನ್ನುಂಟುಮಾಡಿತ್ತು. ವಾಚನವು ಸಾಗುತ್ತಿದ್ದಂತೆ ಮನೆಯೊಳಗಡೆಯಿಂದಲೇ ಇದನ್ನು ಆಲಿಸುತ್ತಿದ್ದ ವಿದ್ವಾಂಸರೂ, ಹಿರಿಯರೂ ಆಗಿದ್ದ ಶ್ರೀಗುರುಗಳ ಹತ್ತಿರದ ಬಂಧುಗಳೊಬ್ಬರು ಕಾವ್ಯದ ರಸದಿಂದ ಆಕರ್ಷಿತರಾಗಿ ತದೇಕ ಮನಸ್ಕರಾಗಿ ಕೇಳುತ್ತಾ ಇವರ ಜೊತೆಗೆ ಬಂದು ಕುಳಿತರು. ಅವರು "ಯಾರೋ ಮಹಾಕವಿ ಇರಕ್ಕಣುಂ" (ಬರೆದವರು ಯಾರೋ ಮಹಾಕವಿಗಳು ಇರಬೇಕು) ಎಂದು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಆಗ ಶ್ರೀಮಹಾಗುರುಗಳು "ಆಮಾಂ ಆಮಾಂ" (ಹೌದು ಹೌದು) ಎಂದು ಮಂದಹಾಸದೊಡನೆ ತಲೆಯಾಡಿಸಿದರಂತೆ. ಕಾವ್ಯಮಂಗಳ ವಾಗುವ ಸಂದರ್ಭದಲ್ಲಿ ಕವಿಯು ಶ್ಲೋಕದಲ್ಲಿ **ಶಾಪೋಽಪ್ಯುದರ್ಕಸುಖದಃ ವಿಮಲೇಂದ್ರಿಯಾಣಾಂ** ಎಂಬ ಪಾದವನ್ನು ಓದಿದಾಗ ಶ್ರೀರಂಗಮಹಾಗುರುಗಳು "ಭಲೇ" ಎಂದು ಹರ್ಷೋದ್ಗಾರ ಮಾಡಿದರಂತೆ. ಮಂಗಳಾಚರಣೆಯ ನಂತರ ಶ್ರೀಗುರುಗಳು ಅಲ್ಲಿಗೆ ದಯಮಾಡಿಸಿ ಇದುವರೆವಿಗೂ ವಾಚನವನ್ನು ಆಲಿಸುತ್ತಿದ್ದ ಆ ಹಿರಿಯ ಸಂಬಂಧಿಕರಿಗೆ ಈ ಕವಿಯ ಪರಿಚಯ ಮಾಡಿಸಿದರಂತೆ.

ಅತ್ಯಂತ ಪವಿತ್ರವಾದ ಸನ್ನಿವೇಶವನ್ನು ಸ್ವಯಂ ಭಾಗವತಶಿರೋಮಣಿಗಳಾದ ಶ್ರೀ ಶ್ರೀ ರಂಗಪ್ರಿಯ ಶ್ರೀ ಶ್ರೀಯವರು ದೈವಪ್ರೇರಣೆಯೋ ಎಂಬಂತೆ ತಮ್ಮ ಕಾವ್ಯಕ್ಕೆ ವಿಷಯವನ್ನಾಗಿ ಆರಿಸಿಕೊಂಡಿದ್ದರಲ್ಲಿ ಆಶ್ಚರ್ಯವೇನಿಲ್ಲ. ಅಷ್ಟೇ ಅಲ್ಲದೆ ಮೂಲಕಥೆಯ ಆಸ್ವಾದನೆಯಿಂದ ದೊರಕಬಹುದಾದ ಭಕ್ತಿ, ಭಾವ, ರಸಗಳಿಗೆ ಸ್ವಲ್ಪವೂ ಕುಂದುಬಾರ ದಂತೆ, ಮೂಲದ ಮುಡಿಕುಸುಮವು ಸ್ವಲ್ಪವೂ ಬಾಡದಂತೆ ಮತ್ತೂ ಅತಿಶಯವಾದ ಆನಂದರಸವು ಉಕ್ಕುವಂತೆ ರಚಿಸಿದ್ದಾರೆ. ಎಲ್ಲಕ್ಕೂ ಮಿಗಿಲಾಗಿ ಆತ್ಮ ಸಾಮ್ರಾಜ್ಯವನ್ನೇ ತಮ್ಮದಾಗಿಸಿಕೊಂಡಿದ್ದ ಅವತಾರವರಿಷ್ಠರೆಂದೇ ಭಾವಿಸಿದ್ದ ತಮ್ಮ ಶ್ರೀರಂಗಮಹಾ ಗುರುಗಳಿಂದಲೇ "ಭಲೇ" ಎಂಬುದಾಗಿ ಮೆಚ್ಚುಗೆಗೆ ಪಾತ್ರವಾದ ಈ "ಗಜೇಂದ್ರಮೋಕ್ಷ" ಶ್ರೀಮದ್ಭಾಗವತದ ಕಥೆಯಂತೆಯೇ ಮುಕ್ತಿಪ್ರದವಾಗಿದೆ ಎಂಬುದರಲ್ಲಿ ಯಾವ ಸಂಶಯವೂ ಉಂಟಾಗಲಾರದು.

ಹೆಡತಲೆಯಿಂದ ಶ್ರೀಸ್ವಾಮೀಜಿಯವರು ಗುರುವರ್ಯರ ಆಶೀರ್ವಾದ ಪಡೆದು ಹಿಂತಿರುಗಿ ಮೈಸೂರಿಗೆ ಬಂದು ಸ್ಪರ್ಧೆಗಾಗಿ ತಮ್ಮ ಕಾವ್ಯವನ್ನು ಕಳುಹಿಸಿದರಂತೆ. ಕೃತಿ ರತ್ನವು ಪ್ರಥಮಪುರಸ್ಕಾರಕ್ಕಾಗಿ ಆಯ್ಕೆಯಾಗಿ ಬಹುಮಾನಿತವಾದದ್ದರಲ್ಲಿ ಆಶ್ಚರ್ಯವೇನಿದೆ?

**ಗ್ರಂಥರಚನೆ :**

ಶ್ರೀಚರಣರು, ಆರ್ಯಭಾರತಮಹರ್ಷಿಗಳ ವಿಚಾರಧಾರೆಯಿಂದಲೂ ಮತ್ತು ಭಾರತೀಯಸಾಂಸ್ಕೃತಿಕವಿಷಯಗಳನ್ನು ಪ್ರತಿಪಾದಿಸುವ ಅನೇಕವಿಚಾರ ಗಳನ್ನೊಳಗೊಂಡ ಅನೇಕಗ್ರಂಥಗಳನ್ನು ರಚಿಸಿರುತ್ತಾರೆ. ಅವುಗಳಲ್ಲಿ ಮುಖ್ಯವಾಗಿ, ಭಾರತೀಯರ ಹಬ್ಬಹರಿದಿನಗಳು, ಸಂಸ್ಕಾರಗಳು, ವಿಚಾರಸುಮನೋಮಾಲಾ, ಭಾಗವತ (4 ಭಾಗಗಳಲ್ಲಿ), ಉಪನಯನ,

ವಿವಾಹಕ್ಕೊಂದು ಕೈಪಿಡಿ, ವಿಶ್ವರೂಪ ದರ್ಶನ, ಸ್ತುತಿರತ್ನಮಾಲಾ, ಶ್ರಾದ್ಧ-ಪಿತೃಪೂಜೆ, ಸಂಧ್ಯಾವಂದನೆ, Insights into Sanatana Dharma ಇತ್ಯಾದಿಗಳು. ಅಲ್ಲದೇ ಶ್ರೀಚರಣರು ನಟರಾಜಬಿನ್ನಪಮ್ ಎಂಬ ಕೃತಿಯನ್ನು ಕನ್ನಡದಲ್ಲೂ ಶ್ರೀಗುರುಕಲ್ಪವಲ್ಲರೀ, ಶ್ರೀಯೋಗನಿದ್ರಾಸ್ತುತಿ, ಶ್ರೀಗಣೇಶಮಾನಸಪೂಜಾ, ಸೌಮ್ಯಕಾಳಿಶ್ರೀಕೋಶ ಮುಂತಾದ ಕೃತಿಗಳನ್ನು ಸಂಸ್ಕೃತದಲ್ಲಿಯೂ ರಚಿಸಿರುತ್ತಾರೆ.

ಅಲ್ಲದೆ ಶ್ರೀಚರಣರ ಮುಖಾರವಿಂದದಿಂದ ಹೊರಹೊಮ್ಮಿದ 'ಸೀತೆಯ ಅಗ್ನಿಪ್ರವೇಶ', 'ವಾಲಿವಧೆ', 'ವಿಭೀಷಣಶರಣಾಗತಿ' ಮುಂತಾದ ಪ್ರವಚನಗಳು ಶ್ರೋತೃವೃಂದಕ್ಕೆ ಅವಿಸ್ಮರಣೀಯ ಆನಂದವನ್ನೂ, ಭಾರತೀಯಸಂಸ್ಕೃತಿಯ ಆಳವಾದ ನೋಟವನ್ನೂ ದೊರಕಿಸಿಕೊಟ್ಟಿವೆ.

**ಗಜೇಂದ್ರಮೋಕ್ಷಗ್ರಂಥದ ಪರಿಚಯ** – ಐದು ಸರ್ಗಗಳಿಂದಲೂ 220 ಶ್ಲೋಕಗಳಿಂದಲೂ ಭಕ್ತಿರಸಸ್ಯಂದಿಯಾಗಿಯೂ, ವರ್ಣನಾಚಾತುರ್ಯದಿಂದಲೂ ಕೂಡಿದೆ ಈ ಪುಟ್ಟ ಚೊಕ್ಕ ಕಾವ್ಯ 'ಗಜೇಂದ್ರಮೋಕ್ಷ'. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಈ ಕಾವ್ಯದ ಸಂಕ್ಷಿಪ್ತಪರಿಚಯವನ್ನು 95 ಆಯ್ದ ಶ್ಲೋಕಗಳಲ್ಲಿ ಸಂಗ್ರಹಿಸಿ 'ಗಜೇಂದ್ರ ಮೋಕ್ಷಸಂಗ್ರಹ'ವೆಂಬ ಶೀರ್ಷಿಕೆಯಡಿ ಪ್ರಕಾಶಿಸಲಾಗಿದೆ.

ಮಂಗಳಾಶಂಸನ, ಗಜೇಂದ್ರವಿಹಾರ, ಗಜೇಂದ್ರದುಃಸ್ಥಿತಿ, ಗಜೇಂದ್ರಕೃತ ನಾರಾಯಣಸ್ತುತಿ ಮತ್ತು ಗಜೇಂದ್ರಾನುಗ್ರಹಗಳೆಂಬ ಅನ್ವರ್ಥಶೀರ್ಷಿಕೆಗಳಿಂದ ಕೂಡಿದ ಐದು ಸರ್ಗಗಳಲ್ಲಿ ಕಥೆಯು ವರ್ಣಿತವಾಗಿದೆ.

ಭಗವಂತನ ಕೃಪಾಕಟಾಕ್ಷದ ವರ್ಣನೆಯಿಂದ ಪ್ರಾರಂಭವಾಗಿರುವ **ಪ್ರಥಮ ಸರ್ಗ**ದಲ್ಲಿ ವಿದ್ಯಾಧಿದೇವತೆಯನ್ನೂ, ವ್ಯಾಸಮಹರ್ಷಿಗಳನ್ನೂ, ಶ್ರೀಶುಕಮಹರ್ಷಿ ಗಳನ್ನೂ ಮತ್ತು ಶ್ರೀಗುರುಪರಂಜ್ಯೋತಿಯನ್ನೂ ಸ್ತುತಿಸಿರುತ್ತಾರೆ. ಈ ಕಥಾ ಭಾಗವನ್ನಾಸ್ವಾದಿಸುವ ಭಾಗವತರ ಗುಣಗಳನ್ನೂ ವಿವರಿಸಲು ತೊಡಗಿರುವ ಗಜೇಂದ್ರಮೋಕ್ಷದ ಆಸೇಚನಕತ್ವವನ್ನೂ, ಕಥೆಯನ್ನಾಸ್ವಾದಿಸುವ ಭಾಗವತರ ಅಧಿಕಾರ ಸಂಪತ್ತಿಯನ್ನೂ ಮತ್ತು ಕಾವ್ಯಗುಣವನ್ನೂ ಬಲು ಸೊಗಸಾಗಿ ವರ್ಣಿಸಿರುತ್ತಾರೆ.

**ದ್ವಿತೀಯಸರ್ಗ**ವು ತ್ರಿಕೂಟಪರ್ವತದ ವರ್ಣನೆಯಿಂದ ಪ್ರಾರಂಭವಾಗುತ್ತದೆ. ಕಥಾನಾಯಕನಾದ ಗಜೇಂದ್ರನ ವರ್ಣನೆಯಾದ ಬಳಿಕ-ನೈದಾಘ (ಬೇಸಿಗೆ)ದ ವರ್ಣನೆ ಬಹಳ ದೀರ್ಘವಾಗಿ ಮೂಡಿಬಂದಿದೆ. ಮುಂದಿನ ಶ್ಲೋಕಗಳಲ್ಲಿ ಜಲಾನ್ವೇಷಣೆಗಾಗಿ ಗಜಯೂಥದ ಪ್ರಯಾಣ ಮತ್ತು ಸರಸ್ಸಿನ ವರ್ಣನೆಗಳಿವೆ. ಕಥೆಯ ಪ್ರತಿನಾಯಕನಾದ ನಕ್ರ (ಮೊಸಳೆ)ದ ವರ್ಣನೆಯಾದ ಬಳಿಕ ಸರೋವರಕ್ಕಿಳಿದ ಗಜಯೂಥದ ವರ್ಣನೆಯು ಮಾಡಲ್ಪಟ್ಟಿದೆ.

ನಕ್ರ-ಗಜೇಂದ್ರರ ಯುದ್ಧವು ಬಹುವಿಸ್ತಾರವಾಗಿ **ತೃತೀಯಸರ್ಗ**ವನ್ನು ಅಲಂಕರಿಸಿದೆ. ದೈವಪ್ರಾಬಲ್ಯದ ಕಥನಾನಂತರ ಹಿಂದೊಮ್ಮೆ ಗಜೇಂದ್ರನಿಂದ ಪ್ರಾಣಾಪಾಯದಿಂದ ರಕ್ಷಿಸಲ್ಪಟ್ಟು ಗಜೇಂದ್ರನ ಇಂದಿನ ದುಃಸ್ಥಿತಿಯನ್ನು ನೋಡಿ ಮರುಗಿದ ಕಪೋತಿಯು (ಹೆಣ್ಣು ಪಾರಿವಾಳ) ಗಜೇಂದ್ರನನ್ನು ವ್ಯಾಜವಾಗಿಟ್ಟುಕೊಂಡು ಮಾನವರಿಗೆ ಸಾಂಸಾರಿಕಸುಖದ ನಶ್ವರತೆಯನ್ನು ಸಾರುವ ಉಪದೇಶದಿಂದಲೂ ಭಗವತ್ಪ್ರಪತ್ತಿಯ ಲಾಭವನ್ನು ಸಾರುವ ಹಿತನುಡಿಗಳಿಂದಲೂ ಕೂಡಿ ಒಳ ಬದುಕಿನೆಡೆಗೆ ದಾರಿ ದೀಪವಾಗಿದೆ.

**ಚತುರ್ಥಸರ್ಗ**ವು ಗುರೂಪದೇಶದಿಂದಲೋ ಎಂಬಂತೆ ಕಪೋತಿಯ ಸಮಯೋಚಿತವಾದ ಹಿತನುಡಿಗಳಿಂದ ಸ್ವಸ್ಥಿತಿಯನ್ನು ಅರಿತ ಗಜೇಂದ್ರನಿಂದ ಮಾಡಲ್ಪಟ್ಟ ನಾರಾಯಣಸ್ತುತಿಗಳಿಂದ ಕೂಡಿದ ಭಕ್ತಿರಸದಿಂದ ಜಿನುಗುತ್ತಿರುವ ಹೃದಯಂಗಮವಾದ ಶ್ಲೋಕಸಮುಚ್ಚಯದಿಂದ ಕೂಡಿದ್ದಾಗಿ ಸಂಸ್ಕಾರಿಗಳಾದ ಸಹೃದಯರ ಮನಸ್ಸನ್ನು ಭಗವದ್ರಸದಲ್ಲಿ ಮುಳುಗಿಸುತ್ತದೆ. ಸ್ತೋತ್ರಪ್ರಿಯರಿಗೆ ಅತ್ಯಂತ ಪ್ರಿಯವಾಗಿ ಕಂಠಪಾಠಯೋಗ್ಯವಾಗಿವೆ ಇಲ್ಲಿನ ಶ್ಲೋಕಗಳು.

**ಪಂಚಮಸರ್ಗ**ದಲ್ಲಿ ಗಜೇಂದ್ರನ ಸ್ತುತಿಯಿಂದ ಸಂತುಷ್ಟನಾದ ಭಗವಂತನ ಭಕ್ತ ಪಾರತಂತ್ರ್ಯ, ಭಗವಂತನ ಪ್ರತಿಕ್ರಿಯೆ, ಭಗವತ್ಸ್ವರೂಪ, ಗಜೇಂದ್ರನ ಸರ್ವಸಮರ್ಪಣಭಾವ, ಸುದರ್ಶನಚಕ್ರದ ವರ್ಣನೆ, ನಕ್ರವಧೆ, ಗಜೇಂದ್ರಸಂತುಷ್ಟಿ ಮತ್ತು ಕಾವ್ಯಸಮರ್ಪಣೆಗಳು ಬಹಳ ಹೃದಯಂಗಮವಾಗಿ ಮೂಡಿಬಂದಿವೆ.

ಸ್ರಗ್ಧರಾ, ಶಾರ್ದೂಲವಿಕ್ರೀಡಿತ, ವಸಂತತಿಲಕಾ, ಉಪಜಾತಿ, ರಥೋದ್ಧತವೇ ಮೊದಲಾದ ವೃತ್ತಗಳನ್ನೂ, ಉಪಮಾ, ರೂಪಕ, ಉತ್ಪ್ರೇಕ್ಷಾ, ಅರ್ಥಾಂತರನ್ಯಾಸವೇ ಮೊದಲಾದ ಅರ್ಥಾಲಂಕಾರಗಳನ್ನೂ ಬಳಸಿಕೊಂಡು, ಸಂಧಿಬಾಹುಳ್ಯವಿಲ್ಲದೆ ಸರಳ ಸಮಾಸಗಳಿಂದ ಕೂಡಿ ಸಹಜವಾಗಿಯೂ, ಸರಸವಾಗಿಯೂ, ಸುಲಭಗ್ರಾಹ್ಯವಾಗಿಯೂ ಮೂಡಿಬಂದಿರುವ ಈ ಕಾವ್ಯವು ಸಹೃದಯರ ಹೃನ್ಮನಗಳನ್ನು ತಣಿಸುವುದರಲ್ಲಿ ಸಂಶಯವಿಲ್ಲ.

## Introduction

## Gajendra Moksha Sangraha

गीता सहस्रनामैव स्तवराजो ह्यनुस्मृतिः । गजेन्द्रमोक्षणञ्चैव पञ्चरत्नानि भारते ॥ is an oft quoted verse. The verse alludes to the five gems present in the Mahabharata viz, The Bhagavadgita, (the Song Divine which sprang from the Bhagavan Himself), the Vishnu/Shiva Sahasranama (a garland of 1000 names of Vishnu/Shiva), -''भीष्मस्तवराज " (composed by the grand sire Bhishma), the अनुगीता (again narrated by Bhagavan Himself) and the गजेन्द्रमोक्षणम् the Deliverence of the Gajendra from this Samsara to Moksha (the Abode Eternal), by Bhagavan. The Gajendra Moksha of Mahabharata is somehow not clearly traceable in any of the present available editions of the work. However, the Story of Gajendra Moksha -The Liberation of Gajendra is available and known to us from the Puranic story, the 8th Skandha (chapter) of the Srimadbhaagavatam. Shuka narrated this story to King Parikshit. Here, Vishnu descended on earth to rescue Gajendra, the elephant, from the crocodile. By Vishnu's grace, Gajendra achieved moksha (liberation from cycle of birth and death).

Gajendra in his previous birth was a great Vishnubhakta and king named Indradyumna. Due to his disrespect to the great Agastya Maharshi, he was cursed to be reborn as an elephant.

The crocodile was a Gandharva king named HuHu in his previous birth. Due to a prank he played on Rishi Devala, he was cursed to be born as a crocodile. He too got mukti (liberation). This incident has been told and retold by many Acharyas, for long.

Readers may refer to these two slokas, which are chanted, by the devout every morning. They were composed by one Nadadur Ammal, who lived in about 13th century. The couplets run thus:

**"ग्राहग्रस्ते गजेन्द्रे रुवति सरभसं तार्क्ष्यमारुह्य धावन्**
**व्याघूर्णन्माल्यभूषावसनपरिकरो मेघगंभीरघोषः ।**
**आबिभ्राणो रथाङ्गं शरमसिमभयं शङ्खचापौ सखेटौ**
**हस्तैः कौमोदकीमप्यवतु हरिरसौ अंहसां संहतेर्नः ॥**

**नक्राक्रान्ते करीन्द्रे मुकुलितनयने मूलमूलेति खिन्ने**
**नाहं नाहं न चाहं न च भवति पुनस्तादृशो मादृशेषु ।**
**इत्येवं त्यक्तहस्ते सपदि सुरगणे भावशून्ये समस्ते**
**मूलं यत्प्रादुरासीत् स दिशतु भगवान् मङ्गलं सन्ततं नः ॥**

These two couplets summarise the entire story of Gajendra, thus:

नक्राक्रान्ते करिन्द्रे मुकुलितनयने अतिखिन्ने गेजेन्द्रे ग्राहग्रस्ते रुवति– When the elephant was caught by the crocodile and the elephant with closed eyes (meaning with a mind set upon the Lord) cried and beseeched protection from मूलमूल -the Primordial Purusha and all those who heard it reacted by saying नाहं नाहं न चाहं न च भवति पुनस्तादृशो मादृशेषु ``It is not addressed to me'', ``It is not me" and ``I cannot be so" and इत्येवंत्यक्त हस्ते सपदि सुरगणे भावशून्ये समस्ते stayed put in their places without rushing in for protecting him, **मूलं यत्प्रादुरासीत् स दिशतु भगवान् मङ्गलं सन्ततं नः** That Paramapurusha the source and substratum of the Universe, who rushed in to protect the elephant, shall be pleased to bestow this grace upon us.

The Divine form for contemplation is detailed thus:

**सरभसं व्याघूर्णन्माल्यभूषावसनपरिकरो मेघगंभीरघोषः ।**
**आबिभ्राणो रथाङ्गं शरमसिमभयं शङ्खचापौ सखेटौ – हस्तैः कौमोदकीम्–**

Bhagavan hastened to protect the elephant being mounted on his mount the गरुड and appeared with a reverberation of the thunder, and his form carried the divine conch, his Discus, mace, a bow and the arrow, the sword. हरिरसौ अंहसां संहतेर्नः (भवतु) Let that Hari destroy our difficulties.

**Poet's introduction**

Sri Sri Rangapriyaswamiji, was known by the name H.S.Varadadeshikachar, before he renounced the world and took up the ascetic order. Swamiji was initiated to the realms of Yoga, by his great Acharya and Yogi-par excellence, Sri SriRanga Mahaguru. Having treaded the path of spiritual practices (Sadhana) from his early age, Swamiji was one of the prominent disciples of the Guru. Extremely happy at the spiritual progress of his disciple, the Guru chose to call him as Rangapriya, a title which became associated with. Considering the blessing, Swamiji was called Varadadeshikacharya Rangapriya and upon assuming the path of renounciation (Sanyasa), took upon the name of Rangapriya only.

Swamiji was endowed with intelligence and was very humble even from his childhood days. He completed the then Intermediate course, at about the age of 18years and entered the Maharaja Samskrit College at Mysore, simultaneously while pursuing his Degree in Economics. Blessed by the Goddess of Knowledge, Swamiji soon gained proficiency, in Sanskrit, that he could endeavor to compose a literary work, within a very short time. Being endowed with scholarship and a heart which lent itself to the subtle bhavas of devotion, the rasas - poetry that flowed from his pen, was a delight to every connoisseur. GajendraMoksha, is one such literary work, that flowed from the Swamiji. Lofty in its descriptions, lucid in style and unsurpassing in its grandeur, this poem fills a reader with joy.

Swamiji once recounted the instance of the composition of this work, Gajendra Moksham. The Samskrit College in which he had enrolled as a student, announced a competition in composing a Mahaakaavya. The poet in Swamiji nudged him to accept the challenge and he did so. Having completed the work, Swamiji intended to read it aloud to his Guru and wished to offer the garland of poems to Him (the Guru) and then submit the same as his contribution to the competition. Being loathe to criticisms that he may have to face from his peers, Swamiji set about to compose the same by devoting sometime in the night, when his fellow-students would be asleep. Swamiji chose the incident of Gajendra Moksha , detailed in Srimad Bhagavatam, for his work.

The plot unfolded in three stages. 1. The suffering of the Gajendra on being caught by the Crocodile 2. The prayer of Gajendra to the Adimula, to rid him of his sufferings. 3. The fruition of his encomium and Gajendra being bestowed with Divine Grace and release, not only from the crocodile, but from the endless cycle of births and deaths (Moksha). The entire poem, Kavya, was composed in about three nights.

